ವಿಜಯಪುರ | ಸಂಪುಟ 04 | ಸಂಚಿಕೆ 094 | ಪುಟ 04 ರೂ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com RNI NO: KARKAN/2023/86203 ರವಿವಾರ, ಮೇ, 31, 2026

"ನಾನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಮತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಮುಂದಿನ ಮುಖ್ಯಮಂತ್ರಿಯನ್ನು ನೇಮಿಸುವ ನಿರ್ಧಾರವನ್ನು ಹೈಕಮಾಂಡ್‌ಗೆ ಬಿಡಲಾಗಿದೆ"



■ ಸಿದ್ದರಾಮಯ್ಯ
ಹಂಗಾಮಿ ಮುಖ್ಯಮಂತ್ರಿ

### ಸಿಎಂ ಸಿದ್ದರಾಮಯ್ಯ ರಿಂದ ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಡಿಕೆ ಶಿವಕುಮಾರ್ ಹೆಸರು ಪ್ರಸ್ತಾಪ | ಮಾಜಿ ಗೃಹ ಸಚಿವ ಡಾ. ಜಿ ಪರಮೇಶ್ವರ ಅನುಮೋದನೆ

## ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಡಿಕೆಶಿ ಆಯ್ಕೆ

ಬೆಂಗಳೂರು: ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ನಂತರ ನೂತನ ಮುಖ್ಯಮಂತ್ರಿ ಆಯ್ಕೆ ಮತ್ತು ಪ್ರಮಾಣವಚನ ಸ್ವೀಕಾರಕ್ಕೆ ಸಿದ್ಧತೆಗಳು ಆರಂಭವಾಗಿದ್ದು, ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರು ಶನಿವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗಿದ್ದಾರೆ.



ಶನಿವಾರ ಸಂಜೆ 4 ಗಂಟೆಗೆ ವಿಧಾನಸೌಧದಲ್ಲಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಿರ್ಗಮಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶಾಸಕಾಂಗ ಪಕ್ಷದ ನಾಯಕನ ಸ್ಥಾನಕ್ಕೆ ಡಿಕೆ ಶಿವಕುಮಾರ್ ಅವರ ಹೆಸರನ್ನು ಪ್ರಸ್ತಾಪಿಸಿದರು. ಅದನ್ನು ಮಾಜಿ ಗೃಹ ಸಚಿವ ಡಾ. ಜಿ ಪರಮೇಶ್ವರ ಅವರು ಅನುಮೋದಿಸಿದರು. ನಂತರ ಎಲ್ಲಾ ಶಾಸಕರು ಅದಕ್ಕೆ ಒಪ್ಪಿಗೆ ನೀಡಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಮೇಲ್ವಿಚಾರಣೆಯಲ್ಲಿ ನಡೆದ ಸಭೆಯಲ್ಲಿ, ಶಾಸಕಾಂಗ ಪಕ್ಷದ ನಾಯಕರಾಗಿ ಡಿಕೆ ಶಿವಕುಮಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಶಾಸಕಾಂಗ ಪಕ್ಷದ ಸಭೆಗೂ ಮೊದಲು ವಿಧಾನಸೌಧ ಕೊಠಡಿಯಲ್ಲಿ ಅಜ್ಜಯ್ಯನಿಗೆ ವಿಶೇಷ ಪೂಜೆ ಸಲ್ಲಿಕೆ ಮಾಡಿಯೇ ಡಿಕೆಶಿ ಆಗಮಿಸಿದ್ದರು. ಸಿಎಲ್‌ಪಿ ಸಭೆಗೆ ಹಾಜರಾದ ಎಲ್ಲಾ ಶಾಸಕ-ರಿಗೆ ಅವರು ಕುಳಿತ ಸ್ಥಳಕ್ಕೇ ತೆರಳಿ ಡಿ.ಕೆ. ಶಿವಕುಮಾರ್ ಹಸ್ತಲಾಘವ ಮಾಡಿದ್ದು ವಿಶೇಷವಾಗಿತ್ತು.

"ನಾನು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಮತ್ತು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದೇನೆ. ಮುಂದಿನ ನಾಯಕನನ್ನು ನೇಮಿಸುವ ನಿರ್ಧಾರವನ್ನು ಹೈಕಮಾಂಡ್‌ಗೆ ಬಿಡಲಾಗಿದೆ" ಎಂದು ಸಿಎಲ್‌ಪಿ ಸಭೆಯಿಂದ ಹೊರಬಂದ ನಂತರ ಸಿದ್ದರಾಮಯ್ಯ ಹೇಳಿದರು.

### ಡಿಕೆಶಿ ಪ್ರಮಾಣವಚನಕ್ಕೆ ಮುಹೂರ್ತ ಫಿಕ್ಸ್



**ಬೆಂಗಳೂರು: ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ಬೆನ್ನಲ್ಲಿಯೇ ನೂತನ ಮುಖ್ಯಮಂತ್ರಿ ಆಯ್ಕೆ ಮತ್ತು ಪ್ರಮಾಣವಚನ ಸ್ವೀಕಾರಕ್ಕೆ ಸಿದ್ಧತೆಗಳು ಆರಂಭವಾಗಿವೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿಕೆ ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡಿದ್ದು, ಬುಧವಾರ ರಾಜ್ಯದ ನೂತನ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಈ ಸಂಬಂಧ ಶನಿವಾರ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಮತ್ತು ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್ ಅವರು, ಜೂನ್ 3 ರಂದು ನೂತನ ಮುಖ್ಯಮಂತ್ರಿಯ ಪ್ರಮಾಣವಚನ ಕಾರ್ಯಕ್ರಮ ರಾಜಭವನದ ಗ್ಲಾಸ್ ಹೌಸ್ ನಲ್ಲಿ ಅತ್ಯಂತ ಸರಳವಾಗಿ ನಡೆಸಲು ತೀರ್ಮಾನಿಸಲಾಗಿದೆ ಎಂದರು.**

## ಎಲ್ಲ ಕಾರ್ಮಿಕರಿಗೂ ಕನಿಷ್ಠ ವೇತನ ನಿಗದಿಪಡಿಸಲು ಸಿಐಟಿಯು ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಮಾಸಿಕ ಸರಾಸರಿ ರೂ.36 ಸಾವಿರ ಕನಿಷ್ಠ ವೇತನ ನಿಗದಿ, ಕಾರ್ಮಿಕ ಸಂಹಿತೆಗಳಿಗೆ ಕರ್ನಾಟಕ ತಿದ್ದುಪಡಿಗಳಿಗಾಗಿ ಹಾಗೂ ಖಾಯಂಯೇತರ ಕಾರ್ಮಿಕರ ಖಾಯಂಗೆ ಶಾಸನಕ್ಕಾಗಿ ಒತ್ತಾಯಿಸಿ ಪ್ರತಿಭಟನೆಯ ಮೂಲಕ ಜಿಲ್ಲಾಧಿಕಾ-ರಿಗಳ ಕಛೇರಿ ಮುಖಾಂತರ ಮುಖ್ಯಮಂತ್ರಿಯವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಸಿಐಟಿಯು ಜಿಲ್ಲಾ ಸಂಚಾಲಕರಾದ ಲಕ್ಷ್ಮಣ ಹಂದ್ರಾಳ ಮಾತನಾಡಿ, ವೈಜ್ಞಾನಿಕವಾಗಿ ಎಲ್ಲಾ ಕಾರ್ಮಿಕರಿಗೂ ಕನಿಷ್ಠ ವೇತನ ನಿಗದಿಪಡಿಸಿ ಜಾರಿ ಮಾಡಿ ಕರ್ನಾಟಕ ರಾಜ್ಯ ಸರ್ಕಾರವು ಕನಿಷ್ಠ ವೇತನವನ್ನು ಪರಿಷ್ಕರಿಸಿ, ಪ್ರತಿ ಉದ್ದಿಮೆಗೆ ಪ್ರತ್ಯೇಕವಾಗಿ ಕನಿಷ್ಠ ವೇತನ ನಿಗದಿ ಮಾಡದೇ ಬಹುತೇಕ ಉದ್ದಿಮೆಗಳಿಗೆ ಏಕರೂಪವಾಗಿ ಹಾಗೂ ಹಿಂದೆ ಇದ್ದ ನಾಲ್ಕು ವಲಯಕ್ಕೆ ಬದಲಾಗಿ ಮೂರು ವಲಯಗಳಾಗಿ ಮಾಡಿ ಮೇ 22ರಂದು ಹೊರಡಿಸಿರುವ ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ಸಿಐಟಿಯು ಸ್ವಾಗತಿಸುತ್ತಲೇ ಇದರಲ್ಲಿರುವ ನ್ಯೂನ್ಯತೆಗಳನ್ನು ಸರಿಪಡಿಸಬೇಕೆಂದು ಆಗ್ರಹಿಸಿದರು. ಸಿಐಟಿಯು ಸಹ ಸಂಚಾಲಕರಾದ ಸುರೇಶ ಜಿ.ಬಿ. ಮಾತನಾಡಿ, ರಾಜ್ಯ ಸರ್ಕಾರ ಕನಿಷ್ಠ ವೇತನದ ಕರಡು ಅಧಿಸೂಚನೆ ಹೊರಡಿಸಿದ ದಿನಾಂಕವಾದ 2025 ಏಪ್ರಿಲ್ 11 ರಿಂದಲೇ ಪೂರ್ವಾನ್ವಯಿಸಿ ಕನಿಷ್ಠ ವೇತನ ಜಾರಿಗೆ ತರುವ ಬದಲಾಗಿ 2026 ಮೇ 22 ರಂದು ಅಧಿಸೂಚನೆ ಹೊರಡಿಸಿದ ದಿನದಿಂದ ಜಾರಿಗೆ ತಂದಿರುವುದು ಬಹುಸಂಖ್ಯಾತ ಕಾರ್ಮಿಕರಿಗೆ ಒಂದು ವರ್ಗದ ಅರಿಯರ್ಸ್ ಸಿಗದಂತೆ ಮಾಡಿದೆ. ಹಾಗಾಗಿ ಕನಿಷ್ಠ ವೇತನವನ್ನು ಏಪ್ರಿಲ್ 2025 ರಿಂದಲೇ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ ಅಧಿಸೂಚನೆ ಹೊರಡಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಗ್ರಾ. ಪಂ ನೌಕರರ ಸಂಘದ ನಾರಾಯಣ ಬಡಿಗೇರ, ಲಾಲ್ ಅಹ್ಮದ ಶೇಖ, ಪಿಂಟು ಕೊಂಡಗೂಳಿ, ಶಿವಾನಂದ ಅನಮಿ, ಸುರೇಖಾ ವಾಗ್ಮೋರೆ, ನೀಲಮ್ಮ ತಡ್ಲಗಿ, ನೀಲಮ್ಮ ಅಥ-'ಣಿ, ದಾನಮ್ಮ ಶಾಪೇಟಿ, ಶೋಭಾ ಪಾಂಡ್ರೆ, ಈರಣ್ಣ ಬೆಳ್ಳುಂಡಗಿ ಮುಂತಾದವರು ಇದ್ದರು.

### ಪ್ರತಿಭಟನೆ ನಡೆಸಿದ ಎಸ್ಐಆರ್ ವಿರೋಧಿ ಪಕ್ಷಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ

## ವಿಜಯಪುರದಲ್ಲಿ ಎಸ್ಐಆರ್ ವಿರೋಧಿಸಿ ಬೃಹತ್ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ರಾಜ್ಯದಲ್ಲಿ ಜಾರಿಗೆ ತರಲು ಮುಂದಾಗಿರುವ ಎಸ್ಐಆರ್ ಕ್ರಮವನ್ನು ತಕ್ಷಣ ಹಿಂಪಡೆಯಬೇಕೆಂದು ಆಗ್ರಹಿಸಿ ಎಸ್ಐಆರ್ ವಿರೋಧಿ ಜಾತ್ಯತೀತ ಸಂಘಗಳು ಹಾಗೂ ಜನಪರ ಸಂಘಟನೆಗಳ ಒಕ್ಕೂಟ ನಗರದ ಜಿಲ್ಲಾಧಿಕಾರಿ ಕಚೇರಿ ಎದುರು ಬೃಹತ್ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಹಾಗೂ ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಿತು.

ವಿಜಯಪುರದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಜನಪರ, ಪ್ರಗತಿಪರ ಹಾಗೂ ರಾಜಕೀಯ ಸಂಘಟನೆಗಳ ಮುಖಂಡರು ಪ್ರತಿಭಟನೆಯಲ್ಲಿ ಭಾಗವಹಿಸಿ, ಖಖಖ ಕ್ರಮದಿಂದ ಬಡವರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರು ಹಾಗೂ ಹಿಂದುಳಿದ ವರ್ಗಗಳ ಮತದಾನದ ಹಕ್ಕಿಗೆ ಧಕ್ಕೆ ಉಂಟಾಗುವ ಸಾಧ್ಯತೆ ಇದೆ ಎಂದು ತೀವ್ರ ಆತಂಕ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖಂಡ ಶ್ರೀನಾಥ ಪೂಜಾರಿ, "ಚುನಾವಣಾ ಪ್ರಕ್ರಿಯೆಯನ್ನು ಪಾರದರ್ಶಕ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ಹೆಸರಿನಲ್ಲಿ ಜಾ-ರಿಗೊಳಿಸಲಾಗುತ್ತಿರುವ ಖಖಖ ಕ್ರಮವು ಸಾಮಾನ್ಯ ಜನರ ಮತದಾನದ ಹಕ್ಕಿನ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. ರಾಜ್ಯ ಸರ್ಕಾರವು ತಕ್ಷಣ ಕೇಂದ್ರ ಚುನಾವಣಾ ಆಯೋಗದ ಮೇಲೆ ಒತ್ತಡ ಹೇರಿ ಈ ಅವೈಜ್ಞಾನಿಕ ಹಾಗೂ ಜನವಿರೋಧಿ ಕ್ರಮವನ್ನು ಹಿಂಪಡೆಯುವಂತೆ ಆಗ್ರಹಿಸಬೇಕು" ಎಂದು ಹೇಳಿದರು.

ಅಹಿಂದ ಮುಖಂಡ ಎಸ್.ಎಂ. ಪಾಟೀಲ ಗಣೀಹಾರ ಮಾತನಾಡಿ, "ಮತದಾರರ ಪಟ್ಟಿಯಲ್ಲಿ ಹೆಸರು ಉಳಿಸಿಕೊಳ್ಳಲು ಅನಗತ್ಯ ದಾಖಲೆಗಳನ್ನು ಕಡ್ಡಾಯಗೊಳಿಸಿರುವುದು ಬಡಜನರಿಗೆ ಸಂಕಷ್ಟ ಉಂಟುಮಾಡಲಿದೆ. ವಿಶೇಷವಾಗಿ ಗ್ರಾಮೀಣ ಭಾಗದ ಜನರಿಗೆ ಜನನ ಪ್ರಮಾಣಪತ್ರ, ಭೂ ದಾಖಲೆ, ಶಿಕ್ಷಣ ದಾಖಲೆಗಳನ್ನು ಒದಗಿಸುವುದು ಕಷ್ಟಕರವಾಗಿದೆ. ಇದ-ರಿಂದ ಸಾವಿರಾರು ಜನರು ಮತದಾನದ ಹಕ್ಕಿನಿಂದ ವಂಚಿತರಾಗುವ ಭೀತಿ ಎದುರಾಗಿದೆ" ಎಂದು ಆತಂಕ ವ್ಯಕ್ತಪಡಿಸಿದರು.ಮನವಿಯಲ್ಲಿ ಚುನಾವಣಾ ಆಯೋಗದ ಕ್ರಮಗಳನ್ನು ಪ್ರಶ್ನಿಸಿರುವ ಸಂಘಟನೆಗಳು, "ಬಡಜನರ ಬಳಿ ದಾಖಲೆಗಳಿಲ್ಲವೆಂಬ ಕಾರಣ-ಕ್ಕೆ ಅವರ ಮತದಾನದ ಹಕ್ಕನ್ನು ಕಸಿದುಕೊಳ್ಳುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ" ಎಂದು ಆರೋಪಿಸಿವೆ.ಖಖಖಕ್ರಮವನ್ನು ಸರ್ಕಾರ ತಕ್ಷಣ ಹಿಂಪಡೆಯದಿದ್ದರೆ ರಾಜ್ಯಾದ್ಯಂತ ಹೋರಾಟ, ಪ್ರತಿಭಟನೆ ಹಾಗೂ ಜನಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಾಗಿ ಒಕ್ಕೂಟ ಎಚ್ಚರಿಸಿದೆ.

ಪ್ರತಿಭಟನೆಯಲ್ಲಿ ಮಹಾನಗರ ಪಾಲಿಕೆ ಸದಸ್ಯೆ ಆರತಿ ಶಹಾಪುರ, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ರಮೇಜಾ ನಧಾಫ್, ಸುರೇಶ ಬಿಜಾಪುರ, ಎಸ್‌ಡಿಪಿಐ ಜಿಲ್ಲಾ ಅಧ್ಯಕ್ಷ ಅತ್ತಾಉಲ್ಲಾ ದ್ರಾಕ್ಷಿ, ಎಸ್‌ಯುಸಿಐ ಮುಖಂಡ ಬಿ. ಭಗವಾನ ರೆಡ್ಡಿ, ಸಿದ್ದಲಿಂಗ ಬಾಗೇವಾಡಿ, ಭರತಕುಮಾರ, ಶಿವಬಾಳಮ್ಮ, ಆಪ್ ಪಕ್ಷದ ಜಿಲ್ಲಾ ಅಧ್ಯಕ್ಷ ಭೋಗೇಶ ಸೊಲ್ಲಾಪುರ ಸೇರಿದಂತೆ ಕಾಂಗ್ರೆಸ್ ಹಾಗೂ ವಿವಿಧ ಸಂಘಟನೆಗಳ ಮುಖಂಡರಾದ ವಸಂತ ಹೊನಮೊಡೆ, ಚಾಂದಸಾಬ ಗಢಗಲಾವ, ಮೈಬೂಬ ಕಲಾದಗಿ, ಲಾಲಸಾಬ ಕೊರಬು, ಅಶೋಕ್ ಬಜಂತ್ರಿ, ಎಂ.ಎಂ. ಮುಲ್ಲಾ, ಗಿರೀಶ್ ಇಟ್ಟಗಿ, ಮಾರುತಿ ಬಂಡಿ, ಫಯಾಜ್ ಕಲಾದಗಿ, ದಸ್ತಗೀರ್ ಸಾಲೋಟಗಿ, ತಾಜೋದ್ದೀನ್ ಖಲೀಫಾ, ರಜಾಕ್ ಕಾಖಂಡಕಿ, ಎಜಾಜ್ ಮಕಬೀಲ್, ಮಂಜುಳಾ ಗಾಯಕವಾಡ, ಸವಿತಾ ಧನರಾಜ, ಹಮೀದಾ ಪಟೇಲ್, ಹಾಜಿ ಪಿಂಜಾರ, ದೇಸು ಚವ್ಹಾಣ ಹಾಗೂ ಭಾರತಿ ನಾವಿ ಉಪಸ್ಥಿತರಿದ್ದರು.

### ಐಟಿಐ ಕೋರ್ಸ್ ಪ್ರವೇಶಕ್ಕೆ ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮುದ್ದೇಬಿಹಾಳ ತಾಲೂಕಿನ ನಾಲತವಾಡ ಸರಕಾರಿ ಐಟಿಐ ಸಂಸ್ಥೆಯಲ್ಲಿ 2026ನೇ ಸಾಲಿನ ಪ್ರತಿಷ್ಠಿತ ಕೋರ್ಸ್ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಎಸ್ಸೆಸ್ಸೆಲ್ಸಿ ಫೇಲಾದ ಅರ್ಹ ಅಭ್ಯರ್ಥಿಗಳಿಗೆ ಎನ್ ಸಿವಿಟಿ ನವದೆಹಲಿಯಿಂದ ಸಂಯೋಜನೆಯಾದ ಎರಡು ಹೊಸದಾಗಿ ಟಾಟಾ ಉದ್ಯೋಗದಡಿ ಪ್ರಾರಂಭ ಮಾಡಲಾಗುವ ಪ್ರತಿಷ್ಠಿತ ಕೊರ್ಸಗಳ ಪ್ರವೇಶಕ್ಕಾಗಿ ಆಫ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಖುದ್ದಾಗಿ ಕಾಲೇಜಿಗೆ ಭೇಟಿ ಮಾಡಿ ಅರ್ಜಿ ಸಲ್ಲಿಸಬಹುದಾಗಿದೆ. ವಿಶೇಷವಾಗಿ ಪ್ರಸ್ತುತ ಸಾಲಿನಿಂದ ಉಚಿತವಾಗಿ ಪ್ರವೇಶ ಒದಗಿಸಲಾಗುವುದು ಎಂದು ಪ್ರಭಾರಿ ಪ್ರಾಚಾರ್ಯ ಪೂಜಪ್ಪ ಪೂಜಾರಿ ತಿಳಿಸಿದ್ದಾರೆ.

ಎರಡು ವರ್ಷ ಅವಧಿಯ ಎಲೆಕ್ಟ್ರೀಸಿಯನ್ ಕೋರ್ಸ್ಗೆ 20 ಸೀಟುಗಳು, ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ ಕೋರ್ಸ್ಗೆ 48 ಸೀಟಗಳು, ಟಾಟಾ ಟೆಕ್ನಾಲಾಜಿ ಉದ್ಯೋಗ ಟ್ರೇಡ್ಸ್ ನಲ್ಲಿರುವ ಮೆಕ್ಯಾನಿಕ್ ಎಲೆಕ್ಟ್ರಿಕ್ ವೆಹಿಕಲ್, ಮ್ಯಾನ್ಯೂಫ್ಯಾಕ್ಚರಿಂಗ್ ಪ್ರೊಸೆಸ್ ಕಂಟ್ರೋಲ್ ಮತ್ತು ಅಟೋಮೇಶನ್, ಇಂಡಸ್ಟ್ರೀಯಲ್ ರೊಬೊಟಿಕ್ಸ್ ಮತ್ತು ಡಿಜಿಟಲ್ ಮ್ಯಾನ್ಯೂಫ್ಯಾಕ್ಚರಿಂಗ್ ಟೆಕ್ನಿಸಿಯನ್, ವರ್ಚುಲ್ ಅನಾಲಿಸಿಸ್ ಮತ್ತು ಡಿಸೈನರ್, ಸಿಎನ್‌ಸಿ ಮಶಿನಿಂಗ್ ಟೆಕ್ನಿಶಿಯನ್, ಎಂಜಿನೀಯರಿಂಗ್ ಡಿಸೈನ್ ಟೆಕ್ನಿಸಿಯನ್ (ಇಡಿಟಿ) ಕೋರ್ಸ್ಗಳ ಸೀಟುಗಳಿವೆ.

ಕೋರ್ಸ್ ಪ್ರವೇಶಕ್ಕೆ ಎಸ್ಸೆಸ್ಸೆಲ್ಸಿ ಅಂಕ ಪತ್ರ 1, ಟಿಸಿ 3, 1ರಿಂದ 10ನೇ ತರಗತಿಯವರೆಗೆ ವ್ಯಾಸಂಗ ಪ್ರಮಾಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಕ್ಷೇತ್ರ ಶಿಕ್ಷಣಾಧಿಕಾರಿ ದೃಢೀಕರಿಸಿದ 1 ರಿಂದ 10ನೇ ತರಗತಿಯವರೆಗೆ ಗ್ರಾಮೀಣ ವ್ಯಾಸಂಗ ಹಾಗೂ ಕನ್ನಡ ಮಾಧ್ಯಮ ಪ್ರಮಾಣ ಪತ್ರ, ಆಧಾರ್ ಕಾರ್ಡ, ಬ್ಯಾಂಕ್ ಪಾಸ್ ಪುಸ್ತಕ, 4 ಪಾಸ್ ಪೋರ್ಟ್ ಸೈಜ್ ಭಾವಚಿತ್ರಗಳು, ಇಮೇಲ್ ಐಡಿ, ಮೊಬೈಲ್ ಸಂಖ್ಯೆ., ಕನಿಷ್ಠ 5 ವರ್ಷಗಳವರೆಗೆ ಕರ್ನಾಟದಲ್ಲಿ ಅಧ್ಯಯನ ಮಾಡಿದ ವ್ಯಾಸಂಗ ಪ್ರಮಾಣ ಪತ್ರಗಳನ್ನು ಸಲ್ಲಿಸಬೇಕು.

### ಶಬ್ಬೀರ ಅತ್ತಾರ ಸೇರಿದಂತೆ ನಿರಾಳೆ ಕುಟುಂಬದ ಐವರಿಗೆ ಅಂತಿಮ ವಿದಾಯ । ಕುಟುಂಬಸ್ಥರ ಆಕ್ರಂದನ । ಹತ್ಯೆಗೆ ಸಂಬಂಧಿಸಿದಂತೆ 12 ಜನರ ಮೇಲೆ ಎಫ್‌ಐಆರ್ ದಾಖಲು

## ಸಾಮೂಹಿಕ ಹತ್ಯೆ ಪ್ರಕರಣ: ಪೊಲೀಸ್ ಭದ್ರತೆಯಲ್ಲಿ ಅಂತ್ಯಸಂಸ್ಕಾರ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಗೋವಿಂದಪುರ ಗ್ರಾಮದಲ್ಲಿ ಶುಕ್ರವಾರ ನಡೆದ ಭೀಕರ ಸಾಮೂಹಿಕ ಹತ್ಯೆ ಪ್ರಕರಣ ಇಡೀ ಭೀಮಾತೀರ ಪ್ರದೇಶವನ್ನು ಬೆಚ್ಚಿಬೀಳಿಸಿದ್ದು, ಹತ್ಯೆಗೀಡಾದ ನಿರಾಳೆ ಕುಟುಂಬದ ಐವರು ಸದಸ್ಯರ ಅಂತ್ಯಸಂಸ್ಕಾರ ಶನಿವಾರ ಪೊಲೀಸ್ ಬಿಗಿ ಭದ್ರತೆಯಲ್ಲಿ ನೆರವೇರಿತು.

ಹತ್ಯೆಗೀಡಾದ ಚಡಚಣ ಪಟ್ಟಣದ ನಿವಾಸಿಗಳಾದ ಮಾಜಿ ತಾಲೂಕು ಪಂಚಾಯಿತಿ ಸದಸ್ಯ ಚಂದು ಅಲಿಯಾಸ್ ಚಂದ್ರಶೇಖರ ನಿರಾಳೆ, ಶಿವಪುತ್ರ ನಿರಾಳೆ, ದುಂಡಪ್ಪ ನಿರಾಳೆ, ರಾಹುಲ್ ನಿರಾಳೆ, ಸಮರ್ಥ ನಿರಾಳೆ ಹಾಗೂ ಶಬ್ಬೀರ ಅತ್ತಾರ ಅವರ ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗಾಗಿ ವಿಜಯಪುರದ ಬಿಎಲ್‌ಡಿಇ ಆಸ್ಪತ್ರೆಗೆ ಶುಕ್ರವಾರ ಸಾಗಿಸಲಾಗಿತ್ತು. ಮರಣೋತ್ತರ ಪರೀಕ್ಷೆ ಪೂರ್ಣಗೊಂಡ ಬಳಿಕ ಶನಿವಾರ ಮೃತದೇಹಗಳನ್ನು ಚಡಚಣಕ್ಕೆ ತರಲಾಯಿತು.

ಮಧ್ಯಾಹ್ನ ಸುಮಾರು 2 ಗಂಟೆಗೆ ಪಟ್ಟಣದ ಹಳ್ಳದ ದಂಡೆಯಲ್ಲಿರುವ ಸ್ಮಶಾನ ಭೂಮಿಯಲ್ಲಿ ನಿರಾಳೆ ಕುಟುಂಬದ 5 ಜನರನ್ನು ಹಿಂದೂ ಸಂಪ್ರದಾಯದಂತೆ ಸಾಮೂಹಿಕವಾಗಿ ಅಗ್ನಿಸ್ಪರ್ಷದೊಂದಿಗೆ ಅಂತ್ಯಸಂಸ್ಕಾರ ನೆರವೇರಿಸಲಾಯಿತು. ಮೃತದೇಹಗಳು ಆಂಬುಲೆನ್ಸ್ ಮೂಲಕ ಸ್ಮಶಾನಕ್ಕೆ ಆಗಮಿಸುತ್ತಿದ್ದಂತೆ ಕುಟುಂಬಸ್ಥರು ಹಾಗೂ ಬಂಧುಗಳು, ಆಪ್ತಮಿತ್ರರ ಆಕ್ರಂದನ ಮುಗಿಲು ಮುಟ್ಟಿತು.

ಇನ್ನೊಂದೆಡೆ, ಈ ಪ್ರಕರಣದಲ್ಲಿ ಮೃತಪಟ್ಟ ಚಡಚಣ ಪಟ್ಟಣದ ನಿವಾಸಿ ಶಬ್ಬೀರ ಅತ್ತಾರ ಅವರ ಅಂತ್ಯಕ್ರಿಯೆಯನ್ನು ಖಬ್ರಸ್ತಾನದಲ್ಲಿ ನೆರವೇ-ರಿಸಲಾಯಿತು.

ಮೃತರ ಅಂತಿಮ ದರ್ಶನ ಪಡೆಯಲು ಅಪಾರ ಸಂಖ್ಯೆಯ ಬಂಧು-ಬಳಗ, ಸ್ನೇಹಿತರು ಹಾಗೂ ಸಾರ್ವಜನಿಕರು ಆಗಮಿಸಿದ್ದರು.

### 12 ಜನರಿಂದ ಕೃತ್ಯ : ಆರೋಪ

**ಪ್ರಕರಣದ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಚಡಚಣ ಪಟ್ಟಣ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಪೊಲೀಸ್ ಇಲಾಖೆ ಬಿಗಿ ಬಂದೋಬಸ್ತ್ ಕೈಗೊಂಡಿತ್ತು. ಹಿರಿಯ ಪೊಲೀಸ್ ಅಧಿಕಾರಿಗಳ ನೇತೃತ್ವದಲ್ಲಿ ಹೆಚ್ಚುವರಿ ಪೊಲೀಸ್ ಪಡೆಗಳನ್ನು ನಿಯೋಜಿಸಲಾಗಿದ್ದು, ಪರಿಸ್ಥಿತಿಯ ಮೇಲೆ ನಿರಂತರ ನಿಗಾ ವಹಿಸಲಾಗುತ್ತಿದೆ.**

**ಚೈತನ್ಯಕುಮಾರ ದುಂಡಪ್ಪ ನಿರಾಳೆ ಅವರು ಚಡಚಣ ಪೊಲಿಸ್ ಠಾಣೆಯಲ್ಲಿ ಕೊಟ್ಟ ಫಿರ್ಯಾದಿ ಪ್ರಕಾರ ಚಡಚಣ ಪೊಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು 12 ಜನರು ಕೂಡಿ ಕೃತ್ಯವೆಸಗಿದ್ದಾರೆ ಎಂದು ಆರೋಪಿಸಿದ್ದು ಕಲ್ಲನಗೌಡ.ಈ.ಪಾಟೀಲ, ಅಪ್ಪುಗೌಡ. ಲ.ಪಾಟೀಲ, ಈಶ್ವರಪ್ಪ.ಲ.ಪಾಟೀಲ, ಪ್ರಕಾಶ .ಬ.ಪಾಟೀಲ(ಮಾಸ್ತರು), ಪ್ರಶಾಂತ ಉರ್ಫ ಪರುಗೌಡ.ಬ.ಪ ಾಟೀಲ, ಸಿದ್ದರಾಮ ಕ.ಪಾಟೀಲ, ಲಾಯಪ್ಪ.ನಿ.ಬಿರಾದಾರ, ಚಿದಾನಂದ.ನಾ.ಕೋಳಿ ಉರ್ಫ ಟಕ್ಕಳಕಿ, ಮಾಸಿದ್ದ.ಶ್ರೀ.ಬಿರಾದಾರ, ಶ್ರೀಮಂತ.ಶ.ಬಿರಾದಾರ, ಶಂಕ್ರೆಪ್ಪ.ಮಾ.ಅರಕೇರಿ, ಅಪ್ಪಾಸಾಬ.ಶ.ಬೋವಿ ಈ 12 ಜನರು ಗೋವಿಂದಪುರದ ನಿವಾಸಿಗಳಾಗಿದ್ದಾರೆ ಎಂದು ಆರೋಪಿಸಲಾಗಿದೆ.**

**ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರು ಗೋವಿಂದಪುರ ಗ್ರಾಮ ಹಾಗೂ ಚಡಚಣ ಪಟ್ಟಣಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.**

**ಹತ್ಯೆಯ ಹಿಂದಿನ ಕಾರಣಗಳು ಹಾಗೂ ಆರೋಪಿಗಳ ಪತ್ತೆಗಾಗಿ ತನಿಖೆಯನ್ನು ತೀವ್ರಗೊಳಿಸಲಾಗಿದ್ದು, ವಿಶೇಷ ತಂಡಗಳನ್ನು ರಚಿಸಿ ಕಾರ್ಯಾಚರಣೆ ಮುಂದುವರಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.**

# ಧೂಮಪಾನ ಮುಕ್ತ ಸಮಾಜ: ಆರೋಗ್ಯಪೂರ್ಣ ನಾಳೆಗಳ ಭರವಸೆ

**ಇಂದು (ಮೇ 31, ರವಿವಾರ) "ವಿಶ್ವ ತಂಬಾಕು ರಹಿತ ದಿನ" ಪ್ರಯುಕ್ತ ಈ ವಿಶೇಷ ಲೇಖನ**

■ **ಉದಯರಶ್ಮಿ ದಿನಪತ್ರಿಕೆ**

ಅಲೆನ್ ಕ್ಯರ್ಸ್ ಅವರು, "Put it out, before it puts you down" ಎಂದು ಹೇಳಿದ್ದಾರೆ. ಟಿ.ವ್ಹಿ. ಮುಂದೆ ಕುಳಿತು ಧಾರವಾಹಿ ಮತ್ತು ಚಲನಚಿತ್ರ ನೋಡುವಾಗಿ ಮಧ್ಯದಲ್ಲಿ ಬರುತವ ಆರೋಗ್ಯಕರ ಎಚ್ಚರಿಕೆ ನೀಡುವ "ಧೂಮಪಾನ ಆರೋಗ್ಯಕ್ಕೆ ಹಾನಿಕರ" ಎಂಬ ಈ ಜಾಹೀರಾತಿನಲ್ಲಿ ತಂಬಾಕು ಮತ್ತು ಧೂಮಪಾನದಂತಹ ದುಶ್ಚಟಕ್ಕೆ ಒಳಗಾಗಿ ಪ್ರಾಣ ಕಳೆದುಕೊಂಡವರ ಮತ್ತು ಜೀವನವನ್ನು ಹಾಳು ಮಾಡಿಕೊಂಡವರ ದೃಶ್ಯವನ್ನು ನಾವೆಲ್ಲರೂ ದಿನನಿತ್ಯ ನೋಡುತ್ತೇವೆ. ಈ ಜಾಹೀರಾತು ಕೇವಲ ಓದುವದಕ್ಕಷ್ಟೇ ಮಾತ್ರ ಸೀಮಿತ ಎಂಬಂತೆ ಅನಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಆಧುನಿಕತೆ ಮತ್ತು ಪಾಶ್ಚಾತ್ಯೀಕರಣದ ಪ್ರಭಾವದಿಂದ ನಮ್ಮ ಯುವ ಜನಾಂಗದ ತಂಬಾಕು, ಬಿಡಿ-ಸಿಗರೇಟ್ ಮತ್ತು ಇನ್ನಿತರ ತಂಬಾಕಿನ ಉತ್ಪನ್ನಗಳಾದ ಗುಟಕಾ, ಮಾವಾ ಅಗೆಯುವಂತಹ ದುಶ್ಚಟಗಳ ದಾಸರಾಗಿ ತಮ್ಮ ಅಮೂಲ್ಯವಾದ ಜೀವನವನ್ನು ಹಾಳು ಮಾಡಿಕೊಳ್ಳುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ.

ವಿಶ್ವ ತಂಬಾಕು ವಿರೋಧಿ ದಿನವು ಕೇವಲ ಒಂದು ವಿಷಯಾಧಾರಿತ ದಿನದ ಆಚರಣೆಯಲ್ಲ. ತಂಬಾಕು ಸೇವನೆಯ ವಿನಾಶಕಾರಿ ಪರಿಣಾಮಗಳ ವಿರುದ್ಧ ಹೋರಾಡಲು ಮತ್ತು ಆರೋಗ್ಯಕರ ಸಮಾಜವನ್ನು ನಿರ್ಮಿಸುವ ಜಾಗತಿಕ ಆಂದೋಲನವಾಗಿದೆ ಎಂದು ಹೇಳಬಹುದು.

ಅದರಲ್ಲೂ ವಿಶೇಷವಾಗಿ ಐಟಿ-ಬಿಟಿ ಮತ್ತು ಕಾರ್ಪೋರೇಟ್ ಜಗತ್ತಿನ ಉದ್ಯೋಗಿಗಳಂತೂ ಕೆಲಸ-ಕಾರ್ಯದ ಒತ್ತಡ, ಖಿನ್ನತೆ ಮತ್ತು ಮಾನಸಿಕತೆಯಂತಹ ಕಾರಣಗಳಿಂದ ತಂಬಾಕು ಮತ್ತು ಅದರ ಇತರ ಉತ್ಪನ್ನಗಳು, ಸಿಗರೇಟ್, ಬೀಡಿ ಮತ್ತು ಹುಕ್ಕಾದಂತಹ ಮಾದಕ ದ್ರವ್ಯಗಳ ಸೇವನೆಯಂತಹ ಕೆಟ್ಟ ಹವ್ಯಾಸಗಳನ್ನು ಬೆಳೆಸಿಕೊಂಡು, ನಂತರ ದುಶ್ಚಟಕ್ಕೆ ಒಳಗಾಗಿ ತಮ್ಮ ಅಮೂಲ್ಯವಾದ ಆರೋಗ್ಯ ಮತ್ತು ಪ್ರಾಣ ಕಳೆದುಕೊಳ್ಳುತ್ತಿರುವುದು ಒಂದು ದುರಂತವೇ ಸರಿ.

ಇಂತಹ ದುಶ್ಚಟಗಳಿಗೆ ದಾಸರಾಗುತ್ತಿರುವ ಯುವಕರನ್ನು ಆ ಕೂಪದಿಂದ ಹೊರ ತರುವ ಪ್ರಯತ್ನದ ಭಾಗವಾಗಿ ಪ್ರತಿ ವರ್ಷ ಮೇ 31 ರಂದು ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ಸಾರ್ವಜನಿಕರು, ಯುವ ಜನತೆ ಮತ್ತು ಸಮುದಾಯದಲ್ಲಿ ತಂಬಾಕು ಸೇವನೆಯಿಂದ ಉಂಟಾಗುವ ಮಾರಣಾಂತಿಕ ಕಾಯಿಲೆಗಳು ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವುದು ಈ 'ವಿಶ್ವ ತಂಬಾಕು ವಿರೋಧಿ ದಿನ' ದ ಆಚರಣೆಯು ಪ್ರಮುಖ ಉದ್ಧೇಶವಾಗಿದೆ.

**ಸ್ವಾಸ್ಥ್ಯ, ಆರೋಗ್ಯಪೂರ್ಣ ಮತ್ತು ಸುಸ್ಥಿರ ಭಾರತಕ್ಕಾಗಿ ತಂಬಾಕು ಸೇವನೆ ಬಿಡಿ**







1987 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಪ್ರಪಂಚದಾದ್ಯಂತ ಸಾರ್ವಜನಿಕರ ಆರೋಗ್ಯದ ಮೇಲೆ ತಂಬಾಕು ಸೇವನೆಯಿಂದ ಉಂಟಾಗುವ ವಿನಾಶಕಾರಿ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸಲು "ವಿಶ್ವ ತಂಬಾಕು ರಹಿತ ದಿನ" ವನ್ನು ಸ್ಥಾಪಿಸಿತು. ನಂತರ ಏಪ್ರೀಲ್ 7 ರಂದು ಡಬ್ಲ್ಯೂ.ಎಚ್.ಎ. 40.38 ನಿರ್ಣಯವನ್ನು ಅಂಗೀಕರಿಸಿ, 'ವಿಶ್ವ ಧೂಮಪಾನ ರಹಿತ ದಿನ" ವನ್ನಾಗಿ ಘೋಷಿಸಿತು. ಹೀಗೆ ಪ್ರತಿವರ್ಷ ಮೇ 31 ರಂದು ವಿಶ್ವ ತಂಬಾಕು ರಹಿತ ದಿನವನ್ನು ಆಚರಿಸಲಾಗುತ್ತಿದೆ. ಇಂದಿನ ಕಾಲದಲ್ಲಿ ಯುವಕರು ದುಶ್ಚಟಗಳ ದಾಸರಾಗುತ್ತಾ, ತಂಬಾಕು, ಧೂಮಪಾನ ಮತ್ತು ಇನ್ನಿತರ ಆರೋಗ್ಯಕ್ಕೆ ಹಾನಿಕಾರಕವಾದ ತಂಬಾಕು ಉತ್ಪನ್ನಗಳನ್ನು ಮಿತಿಮೀರಿದ ಬಳಸುತ್ತಿರುವ ಹಿನ್ನೆಲೆಯಲ್ಲಿ ಅಪಾಯಕಾರಿ ತಂಬಾಕು ಉತ್ಪನ್ನಗಳನ್ನು ಬಳಸದಂತೆ ಯುವಕರಲ್ಲಿ ಅರಿವು ಮೂಡಿಸುವುದು ಈ ದಿನದ ಆಚರಣೆಯ ಪ್ರಮುಖ ಉದ್ದೇಶವಾಗಿದೆ. ತಂಬಾಕು ಅಗೆಯುವುದು ಮತ್ತು ಧೂಮಪಾನ ಮಾಡುವುದರಿಂದ ಆರೋಗ್ಯದ ಮೇಲೆ ಉಂಟಾಗುವ ವ್ಯತಿರಿಕ್ತ ಪರಿಣಾಮಗಳ ಬಗ್ಗೆ ಸಾವು-ನೋವುಗಳ ಬಗ್ಗೆ ತಿಳುವಳಿಕೆ ನೀಡುವ ಮಹೋನ್ನತವಾದ ಉದ್ಧೇಶದಿಂದ ಈ ದಿನವನ್ನು ಆಚರಿಸಲಾಗುತ್ತದೆ.

**ತಂಬಾಕು ಸೇವನೆ ಮತ್ತು ಧೂಮಪಾನ ತ್ಯಜಿಸಿ ಆನಂದವಾಗಿ ಬಾಳಿ-ಬದುಕಿ**

ತಂಬಾಕು ಮತ್ತು ಅದರ ಇತರ ಉತ್ಪನ್ನಗಳ ಬಳಕೆದಾರರಲ್ಲಿ ತಂಬಾಕಿನ ಜೀವನ ಚಕ್ರದ ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವುದು. ಉಂಟಾಗುವ ರೋಗ-ರುಜಿನಗಳು ಮತ್ತು ಎದುರಾಗುವ ಮರಣದಂತಹ ಆಪತ್ತುಗಳ ಬಗ್ಗೆ ಗಮನ ಹರಿಸುವುದು. ಗ್ರಾಹಕರನ್ನು ವಂಚಿಸಿ ಮಾರಾಟ ಮಾಡುವ ತಂಬಾಕು ಕಂಪನಿ ಮತ್ತು ಉತ್ಪಾದಕರನ್ನು ಹೊಣೆಗಾರರನ್ನಾಗಿ ಮಾಡಿ, ಕಠಿಣ ಕ್ರಮ ಕೈಗೊಳ್ಳುವುದು. ಧೂಮಪಾನ ಮತ್ತು ಹೊಗೆರಹಿತ ತಂಬಾಕು ಉತ್ಪನ್ನಗಳು ಸೇರಿದಂತೆ ತಂಬಾಕು ಸೇವನೆಯಿಂದ ಉಂಟಾಗುವ ಆರೋಗ್ಯದ ಅಪಾಯಗಳ ಬಗ್ಗೆ ಸಾರ್ವಜನಿಕರಲ್ಲಿ ಶಿಕ್ಷಣ ನೀಡುವುದು ಇವೆಲ್ಲ ಉದ್ಧೇಶಗಳೊಂದಿಗೆ ಈ ದಿನದ ಆಚರಣೆಯು ಮಹತ್ವವನ್ನು ಪಡೆದುಕೊಂಡಿದೆ.


**ಹದಿಹರೆಯರ ಯುವಕರೇ ದುಶ್ಚಟಕ್ಕೆ ದಾಸರಾಗಬೇಡಿ**

ತಂಬಾಕು ಸೇವನೆಯಿಂದ ಇತ್ತೀಚೆಗೆ ಗ್ಲೋಬಲ್ ಬರ್ಡನ್ ಆಫ್ ಡಿಸೀಸ್ ಅಧ್ಯಯನದ ಪ್ರಕಾರ, ತಂಬಾಕು ಸೇವನೆಯಿಂದ ವಾರ್ಷಿಕವಾಗಿ ಸುಮಾರು 8.7 ಮಿಲಿಯನ್‌ಗಿಂತಲೂ ಹೆಚ್ಚು ಜೀವಗಳನ್ನು ಬಲಿ ತೆಗೆದುಕೊಳ್ಳುತ್ತದೆ. ಇದರಲ್ಲಿ 7.7 ಮಿಲಿಯನ್ ಜನರು ಧೂಮಪಾನದಿಂದ ಸಾವನ್ನಪ್ಪಿದರೆ, 1.1 ಮಿಲಿಯನ್ ಜನರು ಸೆಕೆಂಡ್ ಹ್ಯಾಂಡ್ ಹೊಗೆ ಗೆ ಒಡ್ಡಿಕೊಳ್ಳುವುದರಿಂದ ಸಾವನ್ನಪ್ಪುತ್ತಿದ್ದಾರೆ ಎಂಬ ಅಂಶ ಬೆಳಕಿಗೆ ಬಂದಿರುವುದು ವಿಷಾದನೀಯ ಸಂಗತಿ. 90% ಧೂಮಪಾನಿಗಳಲ್ಲಿ 18 ವರ್ಷಕ್ಕಿಂತ ಮೊದಲೇ ಪ್ರಾರಂಭಿಸಿರುತ್ತಾರೆ ಮತ್ತು ಅದರಲ್ಲಿ ಶೇ.12.5% ರಷ್ಟು ಹದಿಹರೆಯದ ಯುವಕರು ಬಳಸುತ್ತಿದ್ದಾರೆ ಎಂಬ ಅಂಶ ಕಂಡುಬಂದಿದೆ. ಇನ್ನು ನಮ್ಮ ದೇಶದಲ್ಲಿ ತಂಬಾಕು ಸೇವನೆ ಮತ್ತು ಧೂಮಪಾನ ಮತ್ತು ಹೊಗೆ ರಹಿತ ತಂಬಾಕು ಉತ್ಪನ್ನಗಳ ದುಶ್ಚಟಕ್ಕೆ ಒಳಗಾದವರ ಸಂಖ್ಯೆ ಕೇಳಿದರೆ ಖಂಡಿತ ಬೆಚ್ಚಿ ಬೀಳುತ್ತೀರಿ. ಭಾರತದಲ್ಲಿ ಸುಮರು 253 ಮಿಲಿಯನ್ ಗಿಂತಲೂ ಹೆಚ್ಚು ತಂಬಾಕು ಬಳಕೆದಾರರನ್ನು ಹೊಂದಿದ್ದು, ವಿಶ್ವದ ಎರಡನೇಯ ದೊಡ್ಡ ರಾಷ್ಟ್ರವಾಗಿದೆ. ಸುಮಾರು 1.35 ಮಿಲಿಯನ್ ಜನರು ತಂಬಾಕು ಬಳಕೆಯಿಂದ ಸಾಯುತ್ತಾರೆ. ಅಮೂಲ್ಯವಾದ ಆರೋಗ್ಯವನ್ನು ಸಿಗರೇಟಿನ ಹೊಗೆಯಿಂದ ನಿಮ್ಮ ದೇಹವನ್ನು ಸುಡಬೇಡಿ. ಧೂಮಪಾನ ಮಾಡಿದರೆ, ನಿಮ್ಮ ಆರೋಗ್ಯವನ್ನು ಕಳೆದುಕೊಳ್ಳಲಿದ್ದೀರಿ ಮಾತ್ರವಲ್ಲದೇ ನಿಮ್ಮ ಕುಟುಂಬದ ಉಸಿರನ್ನೂ ಕಸಿದುಕೊಳ್ಳತ್ತೀರಿ' ಎಂಬ ವಿಷಯವನ್ನು ಮನದಟ್ಟಾಗಿಸಬೇಕು.



**ಕಂಪನಿಗಳ ಆಕರ್ಷಣೆಯ ಮುಖವಾಡವನ್ನು ಕಳಚುವುದೇ ಈ ವರ್ಷದ ಧ್ಯೇಯವಾಕ್ಯ**

ತಂಬಾಕು ಉತ್ಪನ್ನ ತಯಾರಿಕಾ ಕಂಪನಿಗಳು ನಮ್ಮ ಯುವಕರನ್ನೇ ಕೇಂದ್ರಿಕರಿಸುತ್ತಾ, ಪರಿಣಾಮಕಾರಿ ಮತ್ತು ಪ್ರಭಾವಯುಕ್ತ ಜಾಹೀರಾತಿನಿಂದ ಆಕರ್ಷಣೆ ಮಾಡುತ್ತಿವೆ. ಕೈಗಾರಿಕೆಗಳು ಉತ್ಪಾದಿಸುವ ತಂಬಾಕು ಮತ್ತು ಇನ್ನಿತರ ನಿಕೋಟಿನ್ ವಿಷಕಾರಿಯನ್ನು ಒಳಗೊಂಡ ಹಾನಿಕಾರಕ ಉತ್ಪನ್ನಗಳನ್ನು ಹೇಗೆ ಆಕರ್ಷಿತಗೊಳಿಸುವ ವಾಣಿಜ್ಯದ ತಂತ್ರಗಾರಿಕೆಯ ಬಗ್ಗೆ ಮನಗಾಣಿಸಿ, ಸೇವಿಸದಂತೆ ಮುನ್ನಚ್ಚರಿಕೆ ನೀಡುತ್ತಾ, ಹವ್ಯಾಸಗಳನ್ನು ಬದಲಿಸುವ ಪ್ರೇರಣೆ ನೀಡುವ ಕಾರ್ಯ ನಡೆಯಬೇಕಾಗಿದೆ. ಈ ದಿನದ ಅರ್ಥಪೂರ್ಣ ಆಚರಣೆಯ ಮೂಲಕ ಆ ಮಾದಕ ಮತ್ತು ಆರೋಗ್ಯಕ್ಕೆ ಹಾನಿಕಾರಕ ವಸ್ತುಗಳ ಕಾರಣ-ಪರಿಣಾಮ ತಿಳಿಸುತ್ತಾ, ಯುವ ಜನತೆಯಲ್ಲಿ ಜನಜಾಗೃತಿ ಮೂಡಿಸುವುದೇ ಪ್ರಮುಖ ಧ್ಯೇಯೋದ್ಧೇಶವಾಗಿದೆ.




**ಕೊನೆಯ ನುಡಿ**

ಶ್ರೇಷ್ಠ ಮನಃಶಾಸ್ತ್ರಜ್ಞ ಜಾನ್ ಮ್ಯಾಕ್ಸವೆಲ್ ಅವರು, "ನೀವು ನಿಮ್ಮ ದೈನಂದಿನ ಹವ್ಯಾಸಗಳನ್ನು ಬದಲಿಸದ ಹೊರತು ಬದುಕನ್ನು ರೂಪಿಸಲಾಗದು. ನಿಮ್ಮ ಯಶಸ್ಸಿನ ರಹಸ್ಯ ನೀವು ಮಾಡುವ ಕ್ರಿಯಾ-ಕರ್ಮಗಳ ಮೇಲೆ ನಿಂತಿದೆ" ಎಂದು ಹೇಳಿದ್ದಾರೆ. ಆರೋಗ್ಯವೇ ಭಾಗ್ಯ ಎಂಬ ನಾಣ್ನುಡಿಯಂತೆ ಸಕಾರಾತ್ಮಕ ಅಭ್ಯಾಸಗಳು, ಶಾಶ್ವತ ಸಂತೋಷದ ಕೀಲಿ ಕೈ. ಇಂದಿನ ಅಭ್ಯಾಸಗಳು ನಾಳಿನ ವಾಸ್ತವವನ್ನು ರೂಪಿಸುತ್ತವೆ. ಅದಕ್ಕಾಗಿ ನಾವೆಲ್ಲರೂ ಒಳ್ಳೆಯ ಅಭ್ಯಾಸಗಳನ್ನು ರೂಢಿಸಿಕೊಂಡು, ಆರೋಗ್ಯಯುತ ಬದುಕು ನಮ್ಮದಾಗಿಸೋಣ. ಆರೋಗ್ಯ ಜೀವನಶೈಲಿ ಬೆಳೆಸೋಣ. ತಂಬಾಕು ಮುಕ್ತ ಬದುಕು ಸಾಗಿಸೋಣ. 2035 ರ ವೇಳೆಗೆ ಭಾರತದ ಜನಸಂಖ್ಯೆಯಲ್ಲಿ ಶೇ 60 ರಷ್ಟು ಯುವಕರಿಂದ ಕೂಡಿರುವುದರಿಂದ, ತಂಬಾಕು ತ್ಯಜಿಸಿ ಸದೃಢ ಮತ್ತು ಆರೋಗ್ಯವಂತ ಭಾರತ ನಿರ್ಮಿಸುವ ಪ್ರತಿಜ್ಞೆ ಮಾಡುವಲ್ಲಿ ಪ್ರಾಮಾಣಿಕ ಪ್ರಯತ್ನಶೀಲರಾಗಬೇಕಿರುವುದು ಇಂದಿನ ಅಗತ್ಯತೆಯಾಗಿದೆ.

ಲೇಖನ
■ ಮಲ್ಲಪ್ಪ. ಸಿ. ಖೊದ್ನಾಪೂರ
(ತಿಕೋಟಾ)
ವಿಜಯಪುರ



---



## ಅಪ್ರಾಪ್ತ ಬಾಲಕಿಯ ಪ್ರಕರಣ ಎಸ್.ಐ.ಟಿಗೆ ವಹಿಸಿ: ಚೇತನ ಅಹಿಂಸಾ

ಬೀದರ್: ಮೇ.8ರಂದು ಜಿಲ್ಲೆಯ ಕಮಲನಗರ ತಾಲೂಕಿನ ಬೆಳಕುಣಿ ಗ್ರಾಮದಲ್ಲಿ ಅಪ್ರಾಪ್ತ ಬಾಲಕಿಯ ಹತ್ಯೆ ಪ್ರಕರಣವನ್ನು ಎಸ್.ಐ.ಟಿಗೆ ವಹಿಸಬೇಕೆಂದು ಖ್ಯಾತ ಚಿತ್ರನಟರು ಹಾಗೂ ಹೋರಾಟಗಾರ ಚೇತನ ಅಹಿಂಸಾ ಆಗ್ರಹಿಸಿದರು.

ಶನಿವಾರ ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿರುವ ಅವರು, 16 ವರ್ಷದ ಅಪ್ರಾಪ್ತ ಬಾಲಕಿಂಯು ಓರ್ವ ಕ್ರೀಡಾಪಟು. ಈ ಪ್ರಕರಣ ಎಸಗಿದ ಲಖನ ಬಾಬುರಾವ ಪವಾರ ಇವನನ್ನು ಬಚಾವ್ ಮಾಡಲು ಕಾಣದ ಕೈಗಳು ಕೆಲಸ ಮಾಡುತ್ತಿವೆ ಎಂಬುದು ನಿಧಾನಗತಿಯ ತನಿಖೆಯಿಂದ ಗೊತ್ತಾಗುತ್ತಿದೆ. ಮೊದಲಂತೂ ಈಕೆ ಆತ್ಮಹತ್ಯೆಗೆ ಶರಣಾಗಿದ್ದಾಳೆ ಎಂದು ಕೇಸ್ ದಾಖಲಾಗಿತ್ತು. ಹಲವಾರು ಸಂಘಟಕರ ಹೋರಾಟದ ಪ್ರತಿಫಲ ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಸತ್ಯ ಬಹಿರಂಗವಾಗುತ್ತಿದ್ದಂತೆ ಪೊ\ಕ್ಸೊ ಪ್ರಕರಣ ದಾಖಲಿಸಿದ್ದರೂ ಅಪರಾಧಿಗೆ ಇನ್ನು ಶಿಕ್ಷೆಯಾಗಿಲ್ಲ ಎಂದರು.

ಈ ಪ್ರಕರಣದಲ್ಲಿ ಜಿಲ್ಲಾಡಳಿತ ಹಾಗೂ ಪೊಲಿಸ್ ಇಲಾಖೆ ಎಲ್ಲೊ ಸತ್ಯ ಮರೆ ಮಾರುಚಿತ್ತಿರಬಹುದು ಎಂದೆನಿಸುತ್ತಿದೆ. ಘಟನೆ ನಡೆದು 15 ದಿನಗಳು ಕಳೆದರೂ ಇಲ್ಲಿಗೆ ಐಜಿಪಿಯಾಗಲಿ ಅಥವಾ ಇತರೆ ಹಿರಿಯ ಪೊಲೀಸ್ ಅಧಿಕಾರಿಗಳು ಬರದೆ ಇರುವುದಕ್ಕೆ ಪ್ರಭಾವಿಗಳ ಒತ್ತಡ ಇರಬಹುದು ಅಥವಾ ಆರೋಪಿಯನ್ನು ಈ ಪ್ರಕರಣದಿಂದ ಬಚಾವ್ ಮಾಡಲು ಎಲ್ಲೊ ಒಳಗೊಳಗೆ ಮಸಲತ್ತು ನಡೆಯುತ್ತಿದೆ ಎಂಬ ಅನುಮಾನ ಮೂಡುತ್ತಿದೆ. ಆದ್ದರಿಂದ ಈ ಪ್ರಕರಣ ನಿಸ್ಪಕ್ಷಪಾತವಾಗಿ ತನಿಖೆಯಾಗಲು ಹೊರಗಿನ ಪೊಲೀಸ್ ಅಧಿಕಾರಿಗಳಿಗೆ ಈ ಪ್ರಕರಣದ ಜವಾಬ್ದಾರಿ ವಹಿಸಬೇಕೆಂದು ಅವರು ಒತ್ತಾಯಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಮ್ಮೆ ಶವ ಪರಿಕ್ಷೆ ನಡೆಸಿ, ಅದರ ವರದಿ ಬಹಿರಂಗಗೊಳಿಸಬೇಕು ಹಾಗೂ ಈ ವಿಚಾರವಾಗಿ ಹೋರಾಟ ಮಾಡುತ್ತಿರುವವರ ವಿರೂದ್ಧ ಪ್ರಕರಣ ದಾಖಲಿಸಿ ಅವರ ಧ್ವನಿ ಹತ್ತಿಕ್ಕುವ ಕಾರ್ಯ ನಡೆಯುತ್ತಿದ್ದು, ಅದನ್ನು ಕೈ ಬಿಡಬೇಕು. ಒಟ್ಟಾರೆ ನಿಸ್ಪಕ್ಷಪಾತ ತನಿಖೆಯಾಗಿ ತಪ್ಪಿತಸ್ತರು ಎಷ್ಟೆ ಪ್ರಭಾವಿಗಳಾಗಿರಲಿ ಅವರಿಗೆ ಶಿಕ್ಷೆ ಆಗಬೇಕು ಹಾಗೂ ನೊಂದ ಕುಟುಂಬಕ್ಕೆ ಪ್ರಾಮಾಣಿಕ ನ್ಯಾಯ ಒದಗಿಸುವ ಜವಾಬ್ದಾರಿ ಜಿಲ್ಲಾಡಳಿತ ಹಾಗೂ ಪೊಲಿಸ್ ಇಲಾಖೆ ಮೇಲಿದೆ. ಈ ವಿಚಾರವಾಗಿ ರಾಜ್ಯದ ಗ್ರಹ ಸಚಿವರೊಂದಿಗೆ ಮಾತನಾಡುವೆ ಎಂದವರು ತಿಳಿಸಿದರು.

ನಾನು ಸದಾ ಹೋರಾಟಗಾರನೇ ಹೊರತು ರಾಜಕಾರಣಿ ಆಗಲು ಇಷ್ಟ ಪಡುವುದಿಲ್ಲ. ಆದರೆ ರಾಜ್ಯದಲ್ಲಾಗಲಿ ಹಾಗೂ ದೇಶದಲ್ಲಾಗಲಿ ಬದಲಾವಣೆ ಅಗತ್ಯ. ಇತ್ತಿಚೀಗೆ ಜಿರಳೆ ಜನತಾ ಪಾರ್ಟಿ ಎಂಬ ಸಾಮಾಜಿಕ ಮಾಧ್ಯಮಗಳಲ್ಲಿ ಟ್ರೋಲ್ ಆಗುತ್ತಿರುವುದಕ್ಕೆ ಪ್ರತಿಕ್ರಿಯಿಸಿದ ಚೇತನ ಅವರು, ಬರೀ ಸಾಮಾಜಿಕ ಮಾಧ್ಯಮಗಳಲ್ಲಿ ಗುರ್ತಿಸಿಕೊಂಡರೆ ಜನಪ್ರಿಯತೆ ಬರಲ್ಲ. ಬದಲಿಗೆ ಜನರ ಹತ್ತಿರ ಹೋಗಿ ಅವರ ದುಖ ದುಮ್ಮಾನ ಆಲಿಸುವ ಕೆಲಸ ಆಗಬೇಕು. ಅಂದಾಗ ಬದಲಾವಣೆ ಸಾಧ್ಯ. ಎಲ್ಲ ಸಂದರ್ಭಗಳಲ್ಲಿ ತಮಿಳುನಾಡು ಮಾದರಿ ಆಗುತ್ತದೆ ಎಂಬುದು ಬರೀ ಭ್ರಮೆ ಮಾತ್ರ ಎಂದರು.

ನಟ ದರ್ಶನ ವಿಚಾರವಾಗಿ ಮಾತನಾಡಿದ ಚೇತನಕುಮಾರ, ಅವರು ಆದಷ್ಟು ಬೇಗ ಹೊರ ಬರುತ್ತಾರೆಂಬ ವಿಶ್ವಾಸ ಇದೆ. ಹಾಗೆ ಹೊರ ಬಂದರೂ ಉತ್ತಮ ಜೀವನಶೈಲಿ ರೂಪಿಸಿಕೊಂಡು ಸಾಮಾನ್ಯರಂತೆ ಬದುಕುವಂತಾಗಲಿ ಎಂದರು. ಪತ್ರಕರ್ತ ಶಕ್ತಿಕಾಂತ ಬಾವಿದೊಡ್ಡಿ ಮಾತನಾಡಿದರು.

ಬಿಎಜೆಪಿ ಜಿಲ್ಲಾಧ್ಯಕ್ಷ ಕಪಿಲ ಗೋಡಬೊಲೆ, ದಲಿತ ಮುಖಂಡರಾದ ರಾಜಕುಮಾರ್ ಮೂಲಭಾರತಿ, ಹರ್ಷಿತ್ ದಾಂಡೇಕರ್, ಹನುಮಂತ್ ಮಟ್ಟೆ, ಅಂಬಾದಾಸ್ ಚಕ್ರವರ್ತಿ, ಸಂತೋಷ ಶಿಂದೆ, ಉತ್ತಮ ಸುತಾರ, ರಜನಿಶ ಎಮ್ ಹಾಗೂ ಇತರರು ಪತ್ರಿಕಾಗೋಷ್ಠಿಯಲ್ಲಿದ್ದರು.

## ಪ್ರಗತಿನಗರ ಸೀನಿಯರ್ ಸಿಟಿಜನ್ ಅಸೋಸಿಯೇಷನ್ ಅಭಿವೃದ್ಧಿಗಾಗಿ 50400 ರೂ. ಚೆಕ್ ಹಸ್ತಾಂತರ

ಹೈದ್ರಾಬಾದ:ಹೈದ್ರಾಬಾದದ ಪ್ರಗತಿ ನಗರ ಸೀನಿಯರ್ ಸಿಟಿಜನ್ಸ್ ಅಸೋಸಿಯೇಷನ್ ಅಧ್ಯಕ್ಷ ಸಿ.ಹೆಚ್.ಕಾಮಯ್ಯ ಅಸೋಸಿಯೇಷನ್ ಅಭಿವೃದ್ಧಿಗಾಗಿ 50400 ರೂಪಾಯಿ ಚೆಕ್ಕನ್ನು ಶನಿವಾರ ಅಸೋಸಿಯೇಷನ್ ಖಜಾಂಚಿ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಅಸೋಸಿಯೇಷನ್ ಕಾರ್ಯಕಾರಿ ಸಮಿತಿ ಸದಸ್ಯರಾದ ಜಿ.ಕಾಮೇಶ್ವರರಾವು, ಪಿ.ವಿ. ಸೀತಾರಾಮರಾವು, ಆರ್.ವಿ.ರಮಣಮೂರ್ತಿ, ಹುಲಕುಂಟೋಜಿರಾವು, ರಾಮರಾವು ಮತ್ತಿತರ ಸದಸ್ಯರು ಉಪಸ್ಥಿತರಿದ್ದು, ಅಸೋಸಿಯೇಷನ್ ಅಭಿವೃದ್ಧಿಗಾಗಿ ಹಣ ನೀಡಿದ ಕಾಮಯ್ಯ ಅವರಿಗೆ ಅಭಿನಂದಿಸಿದರು.

## ಸಮಾಜ ಕಾರ್ಯ ಶಿಬಿರ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ದಾರಿ: ಸುಖದೇವ ಕಟ್ಟಿಮನಿ

ಅಫಜಲಪುರ:ತಾಲೂಕಿನ ದೇವಲ ಗಾಣಗಾಪೂರದ ಯತಿರಾಜ ಶಿಕ್ಷಣ ಸಂಸ್ಥೆ ಆವರಣದಲ್ಲಿ ನಾರ್ಥ್ ಕರ್ನಾಟಕ ಡೆಕ್ಕನ್ ಫೌಂಡೇಶನ್, ಪಾರಸ್ ಸಮಾಜ ಕಾರ್ಯ ಮಹಾವಿದ್ಯಾಲಯ ಕಲಬುರಗಿ ಹಾಗೂ ಮಹಾತ್ಮಾ ಗಾಂಧಿ ಸಮಾಜ ಕಾರ್ಯ ಮಹಾವಿದ್ಯಾಲಯ ಅಫಜಲಪುರ ಇವರ ಸಂಯುಕ್ತಾಶ್ರಯದಲ್ಲಿ "ಸಮಾಜ ಕಾರ್ಯ ಶಿಬಿರ" ಕಾರ್ಯಕ್ರಮ ಯಶಸ್ವಿಯಾಗಿ ಜರುಗಿತು.

ಕಾರ್ಯಕ್ರಮವನ್ನು ಕಲಬುರಗಿ ನಗರದ ಪಾರಸ್ ಎಂ.ಎಸ್.ಡಬ್ಲು ಕಾಲೇಜಿನ ಪ್ರಾಂಶುಪಾಲರಾದ ಸುಖದೇವ ಕಟ್ಟಿಮನಿ ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿ, "ಸಮಾಜ ಸೇವೆಯೇ ಶ್ರೇಷ್ಠ ಸೇವೆ. ಇಂತಹ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಸಾಮಾಜಿಕ ಕಳಕಳಿ ಹಾಗೂ ನಾಯಕತ್ವ ಗುಣಗಳನ್ನು ಬೆಳೆಸುವ ಮಹತ್ವದ ವೇದಿಕೆಗಳಾಗಿವೆ.

ವಿದ್ಯಾರ್ಥಿಗಳು ಈ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಸಮಾಜದಲ್ಲಿ ಮಾದರಿ ವ್ಯಕ್ತಿಗಳಾಗಿ ಬದುಕಬೇಕು" ಎಂದು ಕರೆ ನೀಡಿದರು.

ಅಫಜಲಪುರ ಪಟ್ಟಣದ ಪಾರಸ್ ಸಮಾಜ ಕಾರ್ಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ರಾಜಕುಮಾರ ಬಳೂರ್ಗಿ ಮಾತನಾಡಿ, ಸಮಾಜ ಕಾರ್ಯ ಶಿಬಿರಗಳು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿಯಾಗುತ್ತವೆ.

ಗ್ರಾಮೀಣ ಪ್ರದೇಶಗಳ ಸಮಸ್ಯೆಗಳನ್ನು ಅರಿತು ಸೇವಾಭಾವದಿಂದ ಕೆಲಸ ಮಾಡುವ ಮನೋವೃತ್ತಿ ಇಂತಹ ಕಾರ್ಯಕ್ರಮಗಳಿಂದ ಬೆಳೆಸಿಕೊಳ್ಳಬಹುದು ಎಂದು ತಿಳಿಸಿದರು.

ಶಿಬಿರದ ಸಹ ನಿರ್ದೇಶಕಿಯಾದ ಬಸೀರಾ ಗೊಟ್ಯಾಳ ಮಾತನಾಡಿ, ಇಂತಹ ಶಿಬಿರಗಳು ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಜವಾಬ್ದಾರಿ, ಸಹಕಾರ ಮನೋಭಾವ ಹಾಗೂ ಜನಸೇವೆಯ ಚಿಂತನೆ ಬೆಳೆಸುತ್ತವೆ ಎಂದು ಹೇಳಿದರು.



ಉಪನ್ಯಾಸಕರಾದ ಗುರು ಗಂಗನಳ್ಳಿ ಹಾಗೂ ಪ್ರಭು ಬಿರದಾರ ಮಾತನಾಡಿ, ಸಮಾಜ ಕಾರ್ಯ ಶಿಬಿರಗಳು ವಿದ್ಯಾರ್ಥಿಗಳಲ್ಲಿ ನಾಯಕತ್ವ, ಶಿಸ್ತು ಹಾಗೂ ಸೇವಾ ಮನೋಭಾವ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ ಎಂದು ತಿಳಿಸಿದರು.ಈ ಶಿಬಿರದಲ್ಲಿ ವಿವಿಧ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳು, ಸ್ವಚ್ಛತಾ ಅಭಿಯಾನ, ವರದಕ್ಷಿಣೆ ಪಿಡುಗು, ಸಾರಾಯಿ ನಿಷೇಧ ಹಾಗೂ ಬಾಲಕಿಯರ ಮೇಲಿನ ಅತ್ಯಾಚಾರ ತಡೆ ಕುರಿತು ಜಾಗೃತಿ ಮೂಡಿಸುವ ಕಾರ್ಯಕ್ರಮಗಳು ಕಳೆದ ಎರಡು ದಿನಗಳಿಂದ ನಡೆಯುತ್ತಿವೆ. ಪ್ರಾಸ್ತಾವಿಕ ವಾಗಿ ಮಲ್ಲಿಕಾರ್ಜುನ ಕಂಟಿ ಮಾತನಾಡಿದರು. ಶಿಬಿರದ ಉದ್ದೇಶ ಕುರಿತು ಜೈ ಭೀಮ ವಿವರಿಸಿದರು.ಕಾರ್ಯಕ್ರಮದಲ್ಲಿ ಉಪನ್ಯಾಸಕಿ ಮೈನಾಜ್ ಬೇಗಂ ಸೇರಿದಂತೆ ಅನೇಕರಿದ್ದರು. ಜ್ಯೋತಿ ಅಲಂಕಾರ ಸ್ವಾಗತಿಸಿದರು.ಚಂದ್ರಕಲಾ ಹಾಗೂ ಸೌಜನ್ಯ ಪ್ರಾರ್ಥನಾ ಗೀತೆ ನಡೆಸಿಕೊಟ್ಟರು.

ಸಮಾಜ ಕಾರ್ಯದ ಶಿಬಿರಾರ್ಥಿ ಸಿದ್ದರಾಮ ಶಿವಣಗಿ ಕಾರ್ಯಕ್ರಮ ನಿರೂಪಿಸಿದರು. ವಂದನಾರ್ಪಣೆಯನ್ನು ಅಪರಂಜಿ ಮೇತ್ರಿ ನೆರವೇರಿಸಿದರು.

## ಬೀದರ: ಎಐ ಮಹಿಳಾ ಸಮೀಟ್ ಯಶಸ್ವಿ

ಬೀದರ : ನಗರದ ಶಾಹೀನ್ ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್ ವತಿಯಿಂದ ಶಾಹೀನ್ ನಾಲೆಜ್

ಸಿಟಿಯಲ್ಲಿ 18-25 ವರ್ಷದ ಮಹಿಳೆಯರಿಗಾಗಿ ವಿಶೇಷವಾಗಿ ಎಐ ಶೀ ಸಮೀಟ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಸಮಾರಂಭವು ಕೃತಕ ಬುದ್ಧಿಮತ್ತೆ , ಸೈಬರ್ ಕ್ರೈಮ್ ಜಾಗೃತಿ, ಡಿಜಿಟಲ್ ಸುರಕ್ಷತೆ ಹಾಗೂ ಮಹಿಳಾ ರಕ್ಷಣೆಗೆ ಸಂಬಂಧಿಸಿದ ಮೊಬೈಲ್ ಅಪ್ಲಿಕೇಶನಗಳ ಕುರಿತುಕೇಂದ್ರೀಕೃತವಾಗಿತ್ತು. ಕಾರ್ಯಕ್ರಮದ ಅಂಗವಾಗಿ ಎಐ ಕ್ವಿಜ್,ಪೇಪರ್ ಪ್ರೆಜೆಂಟೇಷನ್ ಮತ್ತು ಎಐ ವಿಡಿಯೋ ಮೇಕಿಂಗ್ ಸೇರಿದಂತೆ ವಿವಿಧ ಸ್ಪರ್ಧೆಗಳು ಆಯೋಜಿಸಲಾಯಿತು.

ಬೆಳಗಿನ ಅಧಿವೇಶನದಲ್ಲಿ ಮಲ್ಲಾರೆಡ್ಡಿ ವಿಶ್ವ ವಿದ್ಯಾಪೀಠದ ಉಪಾಧ್ಯಕ್ಷರಾದ ಡಾ.ಪ್ರೀತಿ ರೆಡ್ಡಿ, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾದಪೊ. ಮುಸ್ತಫಾ ಬಸ್ತಿಕೋಡಿ, ಅಕ್ಕಪಡೆ ಸಂಸ್ಥೆಯ ಮುಖ್ಯ ಸಲಹೆಗಾರ್ತಿ ಶೈನಿ ಪ್ರದೀಪಗುಂಟಿ ಹಾಗೂ ಸ್ಟ್ಯಾಂಡರ್ಡ್ ಟಚ್ ಸಂಸ್ಥೆಯ ಸ್ಥಾಪಕ ಮತ್ತು ಮುಖ್ಯ ತಾಂತ್ರಿಕ

ಅಧಿಕಾರಿ ಹಂರ್ಝಾ ಮೌಝುಂ ಅಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು.



ಸಂಜೆಯ ಅಧಿವೇಶನದಲ್ಲಿ "ಹೊಸ ಶಿಕ್ಷಣ ನೀತಿ 2020" ಕುರಿತ ಸ್ಟೂಡೆಂಪಾರ್ಲಿಮೆಂಟ್ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಶಾಹೀನ್ ಗ್ರೂಪ್ ಆಪ್ಇನ್ಸಿಟ್ಯೂಷನ ವ್ಯವಸ್ಥಾಪಕ ನಿರ್ದೇಶಕ ಅಬ್ದುಲ್ ಹಸೀಬ್, ಕಾರ್ಯನಿರ್ವಾಹಕನಿರ್ದೇಶಕ ಅಬ್ದುಲ್ ಮುಖೀತ್, ಅಕಾಡೆಮಿಕ್ ನಿರ್ದೇಶಕಿ ಶೈಸ್ತಾ ನಾಝ್, ಆಡಳಿತ ನಿರ್ದೇಶಕಿ ಜಮೀಲಾ ವಫಾ ಹಾಗೂ ದಿ ಹೆಚ್ ಆರ್ ಎಸ್ ಶೋ ಸಂಸ್ಥಾಪಕರಾದ ಹಬೀಬ್ ಉರಹ್ಮಾನ್ ಶಹಾಬಾದಿ ಅತಿಥಿಗಳಾಗಿ ಭಾಗವಹಿಸಿದರು.

ಶಾಹೀನ್ ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಅವರುಬೆಳಗ್ಗೆ ಮತ್ತು ಸಂಜೆ ಎರಡೂ ಅಧಿವೇಶನಗಳಿಗೆ ಅಧ್ಯಕ್ಷತೆ ವಹಿಸಿದ್ದರು.ಪ್ರಾಂಶುಪಾಲರಾದ ಅಫ್ರಾನಾಝ್ ಅವರು ಎಲ್ಲಾ ಅತಿಥಿಗಳನ್ನು ಹಾಗೂ ಭಾಗವಹಿಸಿದವರನ್ನುಸ್ವಾಗತಿಸಿದರು.

# ಕಾಯುತಿರುವೆ ರಂಗುರಂಗಿನ ರಂಗಿನಾಟಕೆ

■ ಉದಯರಶ್ಮಿ ದಿನಪತ್ರಿಕೆ

ನನ್ನ ಪ್ರೀತಿಯ ಮುದ್ದು!

ಎಂದಿಗಿಂತ ಅಂದು ತುಂಬಾ ಸುಂದರವಾಗಿ ಕಾಣುತ್ತಿದ್ದೆ. ದೇವಲೋಕದ ಅಪ್ಸರೆಯಂತೆ ಸೆಳೆಯುತ್ತಿದ್ದೆ. ಗಾಢ ನೀಲಿ ಬಾರ್ಡರ್ ಇರೋ ತಿಳಿ ಗುಲಾಬಿ ರಂಗಿನ ಮೈಸೂರು ಸಿಲ್ಕ್ ಸೀರೆಯುಟ್ಟು ಅದಕೊಪ್ಪುವ ಬೋಟ್ ನೆಕ್ ಬ್ಲೌಸ್ ತೊಟ್ಟಿದ್ದೆ. ಅದು ನಿನಗೆ ಎಲಿಗೆಂಟ್ ಲುಕ್ ನೀಡಿತ್ತು. ಮುಗ್ಧ ಮನೋಹರವಾಗಿ ನಗುತ್ತಿದ್ದ ನಿನ್ನ ನೋಡಿ ನನ್ನನ್ನೇ ನಾನು ಮರೆತುಬಿಟ್ಟೆ. ನನ್ನ ಹೆಸರನ್ನು ಮೂರು ನಾಲ್ಕು ಸಲ ಆಪ್ತ ಗೆಳೆಯ ಕೂಗಿದ ಮೇಲೆ ವಾಸ್ತವಕ್ಕೆ ಬಂದೆ, ಗೆಳೆಯರೆಲ್ಲ ಕರಿತಾ ಇದ್ದಾರೆ ಬಾ ಎಂದು ಕೈಹಿಡಿದು ಕರೆದುಕೊಂಡು ಹೋದ. ನಿನ್ನ ನೆನಪಿನಲ್ಲಿ ಅಂದು ರಾತ್ರಿ ಕಣ್ರೆಪ್ಪೆಗಳು ಒಂದಕ್ಕೊಂದು ಅಂಟಿಕೊಳ್ಳಲೇ ಇಲ್ಲ.

ಮರುದಿನ ರವಿವಾರ ಹೀಗಾಗಿ ನಿನ್ನನ್ನು ಕಾಣದ ಕಂಗಳು ಮತ್ತೆ ಉಪವಾಸ ಅನುಭವಿಸಿದವು. ಸೋಮವಾರ ನಿನ್ನನ್ನು ನೋಡಲೇಬೇಕೆಂದು ಕಾಲೇಜಿನ ಪಾರ್ಕಿನಲ್ಲಿ ಕಾಯುತ್ತಿದ್ದೆ. ಏ ಪೆದ್ದು ಪೆದ್ದು ಅನ್ನೋ ಮಧುರ ದನಿಗೆ ಹಿಂತಿರುಗಿ ನೋಡಿದೆ. ನಿಧಾನವಾಗಿ ತಲೆಯೆತ್ತಿದೆ ನೆನೆದವರ ಮನದಲ್ಲಿ ಅನ್ನೋ ತರ ಅಲ್ಲಿ ನೀನಿದ್ದೆ. ಹೊಳಪಿನ ಕಣ್ಣೋಟಕ್ಕೆ ಚೆಂದದ ಮೈಮಾಟಕ್ಕೆ ರಂಭೆ ತಿಲೋತ್ತಮೆ ಮೇನಕೆಯರನ್ನು ನಾಚಿಸುವ ಪ್ರೇಮ ಸುಂದರಿಯ ಪ್ರೇಮಕ್ಕೆ ಕ್ಷಣ ಕ್ಷಣ ಮೈ ಮರೆತ್ತಿದ್ದೆ. ನಾಚಿಕೆಯಿಂದ ಓರೆ ಕಣ್ಣಲ್ಲಿ ನೋಡುತ್ತಿದ್ದ ವಾರೆ ನೋಟದ ಒಲವಿಗೆ ಹ್ಯಾಟ್ಸಪ್ ಹೇಳಿಯಾಗಿತ್ತು.

ಅಪರೂಪಕ್ಕೆ ಸಿಕ್ಕ ಅಪರೂಪದ ಸುಂದರಿಯ ಸೌಂದರ್ಯ ರಾಶಿಯನ್ನು ಕಣ್ತುಂಬಿಸಿಕೊಳ್ಳುತ್ತ ಕಣ್ಣಲ್ಲೇ ನಿನ್ನ ರೂಪವನ್ನು ಸ್ಕ್ಯಾನ್ ಮಾಡುತ್ತಿದ್ದೆ. ಅಂಗ ಸೌಷ್ಟವ ಎದ್ದು ಕಾಣುತ್ತಿತ್ತು. ಅಂದು ನೀನು ಹಾಕಿಕೊಂಡ ನೆಟ್ ಡ್ರೆಸ್‌ನಲ್ಲಿ ಕ್ಲಾಸಿ ಆಗಿ ಕಾಣುತ್ತಿದ್ದೆ. ಯಾವುದೇ ಟ್ರೆಂಡ್ ಡ್ರೆಸ್‌ಗೂ ಒಪ್ಪುವಂಥ ಮೈಮಾಟ ನಿನ್ನದು. ಅದರಲ್ಲಿ ನೀನು ಸ್ಲಿಮ್ ಮತ್ತು ಫಿಟ್ ಆಗಿ ಕಣ್ಮನ ಸೆಳೆಯುತ್ತಿದ್ದೆ.


ಆಗ ನನ್ನ ದೃಷ್ಟಿ ನಿನ್ನ ಬೆಳ್ಳನೆಯ ನಡುವಿನ ಮೇಲಿದ್ದ ಕಪ್ಪು ಮಚ್ಚೆಯ ಮೇಲೆ ಬಿತ್ತು. ಆ ಮಚ್ಚೆ ನಗುತ್ತ ನನ್ನನ್ನು ಶೃಂಗಾರ ಮಂಚಕೆ ಬಾ ಎಂದು ಕರೆದಂತಿತ್ತು. ನಡುವನ್ನು ನಯವಾಗಿ ಸವರಿ ನಡುವಿನ ನಡುವಿರುವ ಕಪ್ಪು ಮಚ್ಚೆಗೆ ಮೆತ್ತಗೆ ಮುತ್ತಿಡು ಎಂದು ಮನಸ್ಸು ಒತ್ತಾಯಿಸುತ್ತಿತ್ತು. ಮೆಲ್ಲ ಮೆಲ್ಲನೆ ಸರಸದಾಟಕೆ ತೆರೆದುಕೊಳ್ಳಲು ಹಾತೊರೆಯುತ್ತಿತ್ತು.. ಈ ನಡುವೆ ಮನಸ್ಸು, 'ಗುಲಾಬಿ ರಂಗಿನ ಕೆನ್ನೆಗೆ, ಗಿಳಿ ನಾಸಿಕಕೆ. ಫಳ ಫಳನೆ ಹೊಳೆಯುವ ಕೆಂದುಟಿಗಳಿಗೆ ಮುತ್ತಿನ ಮುದ್ರೆಯನೊತ್ತದೆ ಇರಲಾರೆ. ಮಧುರ ಪ್ರೀತಿಯ ಗಾಳಕೆ ಬೀಳದಿರಲಾರೆ. ಶೃಂಗಾರ ಸುಗ್ಗಿಯ ಸಗ್ಗದ ಪ್ರೇಮಾಂಬರಿ' ಎಂದು ಕವಿತೆ ಗೀಚದಿರಲಾರೆ ಎಂದೆಲ್ಲ ಯೋಚಿಸತೊಡಗಿತ್ತು. ಬೊಗಸೆಯಲ್ಲಿ ಅಂದದ ಮುಖ ಹಿಡಿದು ಲೆಕ್ಕವಿಡಲು ಆಗದಷ್ಟು ಮುತ್ತುಗಳನ್ನು ಮೊಗೆ ಮೊಗೆದು ಕೊಡಬೇಕು ಎನಿಸಿತು. ಸದಾ ನಿನ್ನ ತೋಳ ತೆಕ್ಕೆಯಲ್ಲಿ ಬಂಧಿಯಾಗಿ ಪ್ರೇಮದ ಮಳೆ ಸುರಿಸುವುದನ್ನು ಮನದಲ್ಲಿ ನೆನೆದು ಮೈ ಬೆಚ್ಚಗಾಗಿತ್ತು.



ತಟ್ಟನೆ ನೀನು ನನ್ನ ಒರಟಾದ ಕೈಯನ್ನು ಮೃದುವಾಗಿ ಅಮುಕಿ ಆರಡಿ ಕಟ್ಟುಮಸ್ತಾದ ವ್ಯಕ್ತಿ ಬಿಳಿ ಬಣ್ಣದ ಶರ್ಟ್, ಸ್ಲಿಮ್ ಫಿಟ್ ಬ್ಲೂ ಜೀನ್ಸ್, ಕ್ಲಾಸಿಕ್ ವೈಟ್ ಸ್ನೀರ್ಸ್ನಲ್ಲಿ ಫುಲ್ ಟಿಟ್ಯುಡ್‌ನಿಂದ ನಡೆದು ಬರುತ್ತಿದ್ದರೆ 'ವಾವ್! ಒಳ್ಳೆ ಹಿರೋ ತರ ಕಾಣಸ್ತಾನೆ ಕಣೋ' ಎಂದು ಹುಡುಗಿಯರು ನಿನ್ನ ನೋಡಿ ಗುಸುಗುಸು ಪಿಸುಪಿಸು ಮಾತನಾಡುತ್ತಿದ್ದರು ಅಂತ ಹೇಳಿದಾಗ ನಿನಗೆ ಹೇಗೆ ಕಾಣಸ್ತಿದಿನಿ ಅಂದೆ. ಅದಕ್ಕೆ ಹೀರೋ ತರ ಏನು ನೀನು ಹೀರೋನೇ ಎಂದು ಗಲ್ಲ ಹಿಂಡಿದೆ. ನಾಳೆ ಸಿದ್ಧ ಪಡಿಸಿದ ಭಾಷಣ ಸ್ಪರ್ಧೆ ಇದೆಯಲ್ಲ ಅದಕ್ಕೆ ರೆಡಿಯಾಗಿದ್ದಿನಿ. ನಾಳೆ ಭೇಟಿಯಾಗುವಾ ಎಂದು ನಗೆ ಚೆಲ್ಲಿ ಕೈ ಬೀಸುತ್ತ ಬೈಕ್ ಏರಿದೆ. ಮರುದಿನ ನಿನ್ನ ಭಾಷಣ ಎಲ್ಲ ಹುಡುಗ ಹುಡುಗಿಯರನ್ನೂ ವಾಸ್ತವ ಲೋಕಕ್ಕೆ ತಂದಿಳಿಸಿತ್ತು.



ಪ್ರೀತಿ ಅನ್ನೋದು ಅತ್ಯಂತ ಪವಿತ್ರ ಭಾವ. ಈ ಹದಿಹರೆಯದ ವಯಸ್ಸಿನ ಪ್ರೀತಿಯಲ್ಲಿ ಮಾಡಿದ್ದೆಲ್ಲ ಮಜಾ ಅನಿಸುವುದು. ಅದೊಂದು ಆಟ ಅನಿಸುವುದು. ಆದರೆ ವಿವಾಹ ಅನ್ನೋದು ಮಕ್ಕಳಾಟವಲ್ಲ. ಕಣ್ಮುಚ್ಚಿ ಆಡುವ ಜೂಜಾಟವೂ ಅಲ್ಲ. ಪ್ರೀತಿಯ ಗಲ್ಲಿಯಲ್ಲಿ ಇರುವಾಗ ಕೋಪವೂ ಖುಷಿ ನೀಡುವುದು ನಗು ತ-ರಿಸುವುದು. 'ಈಗ ನನಗೆ ನೀನು ನಿನಗೆ ನಾನು ನಾವಿಬ್ಬರೇ ಜಗತ್ತು.' ನಮ್ಮಿಬ್ಬರ ನಡುವೆ ಯಾರೆಂದರೆ ಯಾರೂ ಬೇಡ. ಕುಟುಂಬ ಸಮಾಜ ಮುಳ್ಳುಗಳಂತೆ ಭಾಸವಾಗುತ್ತವೆ. ಹಣ ಭವಿಷ್ಯ ಎಲ್ಲ ನಗಣ್ಯವೆನಿಸುತ್ತದೆ. ಎಂಥ ದೊಡ್ಡ ಗುಡ್ಡವನ್ನಾದರೂ ನಿನಗಾಗಿ ಕುಟ್ಟಿ ಪುಡಿ ಮಾಡುವೆ. ನಿನಗಾಗಿ ನನ್ನವರನ್ನೆಲ್ಲ ತೊರೆದು ಬರುವೆ ಎಂದೆಲ್ಲ ಆಣೆ ಪ್ರಮಾಣಗಳು ಸಾಮಾನ್ಯವಾಗಿ ನಡದೇ ಇರುತ್ತವೆ. ಫೋನ್ ಕರೆ ಬಾರದಿದ್ದರೆ ಮೆಸೇಜ್ ಬಾರದಿದ್ದರೆ ಆಕಾಶವೇ ಮೈಮೇಲೆ ಬಿದ್ದಂತಾಗುತ್ತದೆ. ಒಬ್ಬರನ್ನೊಬ್ಬರು ಭೇಟಿಯಾಗಲು ಕಾಯುತ್ತಿರುತ್ತವೆ ಯುವ ಮನಸ್ಸುಗಳು. ಪ್ರೀತಿಯೆಂದರೆ ದೈಹಿಕ ಆಕರ್ಷಣೆಯಲ್ಲ. ಅದು ಹಗಲುಗನಸು ಅಲ್ಲ.



ಪ್ರೀತಿ ಎಂಬುದು ಬರಿ ಕನಸಾಗಿ ಉಳಿಯಬಾರದು. ಅದು ವಾಸ್ತವದಲ್ಲಿ ವಿವಾಹ ಬಂಧನದಲ್ಲಿ ವಾಸ್ತವ ನೆಲದ ಮೇಲೆ ಕಾಲೂರಬೇಕು. ಆಗಲೇ ಅದರ ಸಿಹಿ ಕಹಿ ಗೊತ್ತಾಗೋದು.

ಇಲ್ಲಿಯವರೆಗೆ ಒಬ್ಬರಿಗೊಬ್ಬರು ಜಗತ್ತಾಗಿದ್ದ ಬದುಕಿನಲ್ಲಿ ನಿಜವಾದ ಜಗತ್ತಿನ ಪ್ರವೇಶವಾದಾಗ ಹೊಸ ಜಗತ್ತಿನಲ್ಲಿ ಪ್ರೀತಿ ಕಡಿಮೆ ಆಗುವುದಿಲ್ಲ. ಆದರೆ ಜವಾಬ್ದಾರಿಗಳ ಮೂಟೆಯ ಭಾರ ಹೆಚ್ಚಾಗುತ್ತದೆ





ಆಗ ಮೊದಲೆಲ್ಲ ಒಂದು ನಗುವಿಗಾಗಿ ಹಿಂದೆ ಬೀಳುತ್ತಿದ್ದವನು/ಳು ಈಗೀಗ ಹೀಗೇಕೆ ಯಾವುದಕ್ಕೂ ಸಮಯವಿಲ್ಲ, ಸಣ್ಣಪುಟ್ಟ ವಿಷಯಕ್ಕೂ ಮುನಿಸು, ಎಂದು ಮನಸ್ಸು ಕೊರಗುತ್ತದೆ. ಜೊತೆಗೆ ನಿಲ್ಲಬೇಕಿದ್ದ ಇಬ್ಬರ ಕುಟುಂಬಗಳು ಎದುರಿಗೆ ನಿಲ್ಲುತ್ತವೆ ಚೂರಿ ತರ ಇರಿಯುತ್ತವೆ. ನಿಜ ಪ್ರೀತಿಯ ಪರೀಕ್ಷೆ ಆಗ ಆಗುತ್ತದೆ.. ಆ ಪರೀಕ್ಷೆಯಲ್ಲಿ ಗೆಲ್ಲಬೇಕು. 'ನಾನು ಬದಲಾಗುವೆ ನೀನು ಬದಲಾಗು' ಅಂತ ಆಣೆ ಮಾಡಿಕೊಂಡು ಬದುಕಿದರೆ ವಾಸ್ತವದ ಬದುಕಿನಲ್ಲಿ ನೆಮ್ಮದಿಯಿಂದ ಇರಲು ಸಾಧ್ಯ.

ತಂದೆ ತಾಯಿಯ ಆಶೀರ್ವಾದವಿಲ್ಲದ ಮದುವೆ ಸಂತೋಷ ತಾರದು. ನಾವು ನೆಮ್ಮದಿಯಿಂದ ಇದ್ದೇವೆ ಎಂದು ಪ್ರೇಮದ



ಹಕ್ಕಿಗಳು ಹೇಳುತ್ತಿದ್ದರೂ ಮನೆಯವರು ನಮ್ಮೊಂದಿಗಿಲ್ಲ ಎಂಬ ಕೊರಗು ಮನದ ಮೂಲೆಯಲ್ಲಿ ಸದಾ ಕೊರೆಯುತ್ತಿರುತ್ತದೆ. ಹಬ್ಬ ಹರಿದಿನಗಳಲ್ಲಿ ಮನೆಗೆ ಪ್ರೇಮ ವಿವಾಹದ ದಂಪತಿಗಳ ಆಗಮನ ನಿಷಿದ್ಧ. ತಮ್ಮ ಮನೆಯಲ್ಲಿ ಪೂಜಾ ಕಾರ್ಯಗಳಿಗೆ ಮನೆಯವರು ತಮ್ಮೊಂದಿಗಿಲ್ಲ ಎಂಬ ಕೊರತೆ ಪ್ರೇಮಿಗಳಿಗೆ ಕಾಡುತ್ತದೆ. ಇಷ್ಟೇ ಅಲ್ಲ ಹಣಕಾಸಿನ ಜಗಳ ಪ್ರೀತಿಯ ಬುನಾದಿಯನ್ನೇ ಅಲುಗಾಡಿಸುತ್ತದೆ.

ಅದಕ್ಕೆ ಇಬ್ಬರೂ ಒಳ್ಳೆಯ ಕೆಲಸವನ್ನು ತಮ್ಮದಾಗಿಸಿಕೊಳ್ಳಬೇಕು. ಹೀಗಾಗಿ ಅಧ್ಯಯನದಲ್ಲಿ ನಿರತರಾಗಬೇಕು. ಈಗ ಪ್ರೀತಿ ಇದ್ದರೆ ಸಾಕು ಆದರೆ ಮದುವೆ ಆದ ಮೇಲೆ ಹೊಂದಾಣಿಕೆ ತ್ಯಾಗ ಕ್ಷಮೆಯೆಲ್ಲ ಇರದಿದ್ದರೆ ಸಂಸಾರ ಸಸಾರವಾಗಿ ನಡೆಯಲ್ಲ. ಎಂದೆಲ್ಲ ಹೇಳಿ ನನ್ನ ಕಣ್ಣು ತೆರೆಸಿದ್ದೆ.

ನನಗೆ ತಂದೆ ತಾಯಿಯೇ ಎಲ್ಲ ನಿನಗೂ ಕೂಡ ಅಂತ ಗೊತ್ತು ಅದಕ್ಕೆ ಅವರ ಒಪ್ಪಿಗೆ ಪಡದೆ ಅಪ್ಪುಗೆಗೆ ಸಿದ್ಧರಾಗಿ, ಕುತ್ತಿಗೆಗೆ ಮೂರು ಗಂಟು ಹಾಕಿ, ಹಣೆಗೆ ಸಿಂಧೂರವಿಟ್ಟು, ಕಾಲುಂಗುರ ತೊಡಿಸಿರುವೆ. ಧೀರ್ಘ ಕಾಲದ ಬೇಸಿಗೆ ಮುಗಿದು ಚಳಿಗಾಲ ಶುರುವಾಗಿದೆ. ಎದೆಯೊಳಗೆ ಪ್ರೀತಿಯ ಕಾವನ್ನು ಹೆಚ್ಚಿಸುತ್ತಿವೆ. ತಂಗಾಳಿಯೂ ನಿನ್ನ ಮುತ್ತಿನಂತೆ ಕಚಗುಳಿ ಇಡುತ್ತಿದೆ. ನಡುಗುವ ಚಳಿಯಲ್ಲಿ ಚಳಿಗೆ ಅಂಜಿ ನಿನ್ನಪ್ಪಿಕೊಂಡು ನಡುವಿನ ನಡುವಿರುವ ಮಚ್ಚೆಗೆ ಮುತ್ತಿಡುತ ಪ್ರೀತಿಯಲ್ಲಿ ಕರಗುವ ಸುಂದರ ಕಾಲ ಸನ್ನಿಹಿತವಾಗಿದೆ. ಪ್ರತಿ ಋತುವಿನಲ್ಲೂ ಪ್ರಥಮ ರಾತ್ರಿಯ ಪ್ರೀತಿಯ ಸುರಿಮಳೆ ಸುರಿದಾಗ ನನ್ನ ಪ್ರೇಮ ಲೋಕವೇ ರಂಗಾಗುತ್ತದೆ. ರಂಗುರಂಗಿನ ರಂಗಿನಾಟಕೆ ತುದಿಗಾಲಲ್ಲಿ ಕಾಯುತ್ತಿರುವೆ.

**ಇಂತಿ ನಿನ್ನ ಪ್ರೀತಿಯ ಪೆದ್ದು**

ಲೇಖನ
■ ಜಯಶ್ರೀ.ಜೆ. ಅಬ್ಬಿಗೇರಿ.
ಇಂಗ್ಲೀಷ್ ಉಪನ್ಯಾಸಕರು
ಬೆಳಗಾವಿ
ಮೊ: 9449234142



# ಇಂಡಿ ಅರಣ್ಯ ಇಲಾಖೆಯಿಂದ 53 ಸಾವಿರ ಸಸಿ ವಿತರಣೆ



■ ಉದಯರಶ್ಮಿ ದಿನಪತ್ರಿಕೆ

ಇಂಡಿ: ತಾಲೂಕಿನ ಅರಣ್ಯ ಇಲಾಖೆಯಿಂದ ಐವತ್ತಮೂರು ಸಾವಿರ ಸಸಿ ವಿತರಣೆ ಮಾಡಲಾಗುವದೆಂದು ಪ್ರಾದೇಶಿಕ ವಲಯ ಅರಣ್ಯ ಅಧಿಕಾರಿ ಎಸ್.ಜಿ.ಸಂಗಾಲಕ ಮತ್ತು ಸಾಮಾಜಿ-ಕ ವಲಯ ಅರಣ್ಯ ಅಧಿಕಾರಿ ಮಂಜುನಾಥ ಧುಳೆ ತಿಳಿಸಿದ್ದಾರೆ.

ಅದರಲ್ಲಿ ಪ್ರಾದೇಶಿಕ ವಲಯದಲ್ಲಿ 34 ಸಾವಿರ ಮತ್ತು ಸಾಮಾಜಿಕ ಅರಣ್ಯ ಇಲಾಖೆಯಲ್ಲಿ 19 ಸಾವಿರ ಅಗಿಗಳು ಲಭ್ಯ ಇವೆ.

ಅಗಿಗಳನ್ನು ಇದೇ ಜೂನ 1 ರಿಂದ ವಿತ-ರಿಸಲಾಗುತ್ತದೆ. ಒಬ್ಬ ರೈತನಿಗೆ ಒಂದು ಎಕರೆ ಜಮೀನಿಗೆ 160 ಸಸಿ ವಿತರಣೆ ಮಾಡಲಾಗುತ್ತದೆ.

ರೈತರು ಸಸಿ ಪಡೆಯಲು ಬರುವಾಗ ಆಧಾರ ಕಾರ್ಡು ಮತ್ತು ಜಮೀನು ಉತಾರೆ ತರಬೇಕು ಎಂದರು.

ಪ್ರಾದೇಶಿಕ ವಲಯದಲ್ಲಿ 8*12 ಮಹಾಗನಿ, ಹೆಬ್ಬೆವು, ಸೀತಾಫಲ, ಶ್ರೀಗಂಧ ರಕ್ತ ಚಂದನ ಇಪ್ಪತ್ತು ಸಾವಿರ ಅಗಿಗಳಿದ್ದು ಪ್ರತಿ ಅಗಿಗೆ ರೂ 6 ರಂತೆ ಮತ್ತು 6*9 ನಿಂಬೆ, ನುಗ್ಗೆ, ಸೀತಾಫಲ, ಬಾರೆ ಸಾಗವಾನಿ ಪೇರು ಅಗಿಗಳಿದ್ದು ಅವು ಪ್ರತಿ ಒಂದಕ್ಕೆ ರೂ ಮೂರು ರೂ ದಂತೆ ನೀಡಲಾಗುವದು.

ಸಾಮಾಜಿಕ ವಲಯದಲ್ಲಿ 8*12 ಹದಿನಾಲ್ಕು ಸಾವಿರ ಅಗಿಗಳಿದ್ದು ಪ್ರತಿಯೊಂದಕ್ಕೆ ರೂ 6 ರಂತೆ ನಿಂಬೆ, ನುಗ್ಗೆ, ಸೀತಾಫಲ, ಬಾರೆ ಶ್ರೀಗಂಧ ರಕ್ತಚಂದನ ಮತ್ತು 6*9 ನಾಲ್ಕು ಸಾವಿರ ಅಗಿಗಳಿದ್ದು ಅದರಲ್ಲಿ ಪ್ರತಿಯೊಂದಕ್ಕೆ ರೂ ಮೂರರಂತೆ ನಿಂಬೆ ನುಗ್ಗೆ ಸೀತಾಫಲ, ಬಾರೆ ಶ್ರೀಗಂಧ ರಕ್ತಚಂದನ ಅಗಿಗಳಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೂ.5ಕ್ಕೆ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಚಿತ್ರಕಲಾ ಸ್ಪರ್ಧೆ

■ ಉದಯರಶ್ಮಿ ದಿನಪತ್ರಿಕೆ

ಮುದ್ದೇಬಿಹಾಳ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪಟ್ಟಣದ ವ್ಯಾಪ್ತಿಯಲ್ಲಿ ಬರುವ ಎಲ್ಲ ಶಾಲೆಗಳ 6 ರಿಂದ 10 ನೇ ತರಗತಿ ಓದುವ ವಿದ್ಯಾರ್ಥಿಗಳಿಗೆ ಪರಿಸರ ಅರಿವು – ಜಾಗೃತಿ ಚಿತ್ರಕಲಾ ಸ್ಪರ್ಧೆ ಹಮ್ಮಿಕೊಂಡಿದೆ.

ಮಕ್ಕಳಲ್ಲಿ ಪರಿಸರ ಪ್ರಜ್ಞೆ ಮೂಡಿಸುವ ಸಲುವಾಗಿ ಈ ಸ್ಪರ್ದೆಯನ್ನು ಏರ್ಪಡಿಸಲಾಗಿದ್ದು, ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಯಾವುದೇ ಪ್ರವೇಶ ಫೀ ಇರುವುದಿಲ್ಲ. ಸ್ಪರ್ಧಿಗಳು ತಮ್ಮ ಚಿತ್ರ ಬಿಡಿಸಲು ಬೇಕಾದ ಕುಂಚ, ಬಣ್ಣ, ಪೆನ್ಸಿಲ್ ಇತ್ಯಾದಿ ಪರಿಕರಗಳನ್ನು ತಾವೇ ತರಬೇಕು. ಚಿತ್ರ ಬಿಡಿಸುವ ಪೇಪರ್ ಅನ್ನು ಬಳಗದವರೇ ಪರೀಕ್ಷೆಯ ಸಮಯದಲ್ಲಿ ನೀಡುತ್ತಾರೆ. ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಪ್ರಥಮ ರೂ. 2000, ದ್ವಿತೀಯ ರೂ. 1500 ಹಾಗೂ ತೃತೀಯ ರೂ.1000 ಬಹುಮಾನ ನೀಡಲಾಗುವುದು. ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಪ್ರತಿಯೊಬ್ಬ ವಿದ್ಯಾರ್ಥಿಗಳಿಗೆ ಆಕರ್ಷಕ ಬಹುಮಾನ ನೀಡಲಾಗುವುದು. ವಿದ್ಯಾರ್ಥಿಗಳು ನೇರವಾಗಿ ಚಿತ್ರಕಲಾ ಸ್ಪರ್ಧೆ ನಡೆಯುವ ದಿನ ಜೂ5 ರಂದು ಬೆ7.30 ಕ್ಕೆ ಪಟ್ಟಣದ ಹುಡ್ಕೋದ 10ನೇ ಕ್ರಾಸ್ ನಲ್ಲಿರುವ ಉದ್ಯಾನವನಕ್ಕೆ ಬರಬೇಕು. ಸ್ಪರ್ಧೆಯ ಫಲಿತಾಂಶವನ್ನು ಜೂ7 ರ ಬೆ8 ಗಂಟೆಗೆ ನಡೆಯುವ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗೆ ಮೊ.9980449611, 6363020440, 9686772526 ಸಂಖ್ಯೆಗಳನ್ನು ಸಂಪರ್ಕಿಸುವಂತೆ ಹಸಿರು ತೋರಣ ಬಳಗ ಪ್ರಕಟಣೆಯಲ್ಲಿ ತಿಳಿಸಿದೆ.

# ದೇವರ ಅಸ್ತಿತ್ವ ಸರಳಗೊಳಿಸಿದ್ದು 12ನೇ ಶತಮಾನದಲ್ಲಿ: ಬೇವಿನಗಿಡದ

■ ಉದಯರಶ್ಮಿ ದಿನಪತ್ರಿಕೆ



ಮುದ್ದೇಬಿಹಾಳ: ಯಜ್ಞ, ಯಾಗಾದಿಗಳು, ಅದ್ದೂರಿ, ಆಡಂಬರದ ಖರ್ಚುಗಳ ಮೂಲಕ ಜನಸಾಮಾನ್ಯರಿಗೆ ನಿಲುಕದ ಗಗನ ಕುಸುಮವಾಗಿದ್ದ ದೇವರ ಅಸ್ತಿತ್ವವನ್ನು 12 ನೇ ಶತಮಾನದ ಬಸವಾದಿ ಶರಣರು ತಮ್ಮ ನಡೆ, ನುಡಿ, ವಚನಗಳ ಮೂಲಕ ಸರಳಗೊಳಿಸಿದರು ಎಂದು ಮಹಾಮನೆ ಬಳಗದ ಅಧ್ಯಕ್ಷರಾದ ಎಸ್.ಎ.ಬೇವಿನಗಿಡದ ಹೇಳಿದರು.

ಪಟ್ಟಣದ ವಿಶ್ವಕರ್ಮ ಬಡಾವಣೆಯಲ್ಲಿರುವ ಮಹಾಬಲೇಶ್ವರ ಗಡೇದ ಅವರ ಮನೆಯಲ್ಲಿ ಹಮ್ಮಿಕೊಂಡಿದ್ದ 1057 ನೇ "ಮಹಾಮನೆ" ಕಾರ್ಯಕ್ರಮದಲ್ಲಿ ಶರಣ ಗುರುಪುರದ ಮಲ್ಲಯ್ಯನವರ ವಚನ ವಿಶ್ಲೇಷಿಸಿ ಅವರು ಮಾತನಾಡಿದರು.

ಕನ್ನಡದ ನೆಲದಲ್ಲಿ ಅಚ್ಚಳಿಯದ ತಿರುವು ಪಡೆದುಕೊಂಡ ಯುಗ. ಸಾಮಾಜಿಕ, ಧಾರ್ಮಿಕ ಚಿಂತನೆಗಳಿಗೆ ತಿರುವು ಕೊಟ್ಟ ಕಾಲ 12ನೇ ಶತಮಾನ. ಶ್ರೀಮಂತರ ಸ್ವತ್ತಾಗಿದ್ದ ದೇವರು, ಆಚಾರ, ವಿಚಾರ, ಸಂಪ್ರದಾಯ, ಆಧ್ಯಾತ್ಮಿಕ ನೆಲೆಯನ್ನು ಶರಣರು ಬದಲಿಸಿದರು. ಏನೊಂದೂ ಓದದ ಜನ ಸಾಮಾನ್ಯರು, ಮಹಿಳೆಯರು ಶ್ರೇಷ್ಠ ಮಟ್ಟದ ವಚನಗಳನ್ನು ಬರೆದರು. ಬರೆದಂತೆಯೇ ತಮ್ಮ ಜೀವನ ರೂಪಿಸಿಕೊಂಡರು ಎಂದು ಹೇಳಿದರು.

ಈ ವೇಳೆ ಶರಣಬಸಪ್ಪ ಗಡೇದ ಮಾತನಾಡಿದರು. "ಕಾಯಕ ಯೋಗಿ" ಪ್ರಶಸ್ತಿ ಪಡೆದ ಮಹಾಬಲೇಶ್ವರ ಗಡೇದ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು.

ದಾನಪ್ಪ ನಾಗತಾಣ, ಹಸಿರು ತೋರಣ ಬಳಗದ ಅಧ್ಯಕ್ಷ ಅಮರೇಶ ಗೂಳಿ, ಎನ್.ಎಸ್.ಹಿರೇಮಠ, ಬಸವರಾಜ ನಾಲತವಾಡ, ಬಸವರಾಜ ಕೋರಿ, ಎಸ್.ಎಚ್.ಪಾಟೀಲ, ಎಚ್.ಬಿ.ದಳವಾಯಿ, ಸಂಗಣ್ಣ ಕಂಚ್ಯಾಣಿ, ಎಸ್.ಆರ್.ಗೌಡರ, ಎಂ.ಎಸ್.ಬಿರಾದಾರ, ಚಂದ್ರಶೇಖರ ಪ್ಯಾಟಿಗೌಡರ, ಶ್ರೀಶೈಲ ಕತ್ತಿ, ಕೆ.ಆರ್.ಕಾಮಟೆ, ಬಿ.ಎಂ.ಪಲ್ಲೇದ, ಎನ್.ಎಸ್.ಮಠ, ಜಿ.ಆರ್.ಕಲಬುರ್ಗಿ, ಈರಣ್ಣ ಶಿರವಾಳ, ಅಶೋಕ ರೇವಡಿ, ನಾಗಭೂಷಣ ನಾವದಗಿ, ರವಿ ಗೂಳಿ, ಶ್ರೀ ಶೈಲ ಮರೋಳ, ಅಮರೇಶ ಐಹೊಳೆ, ಬಸಲಿಂಗಪ್ಪ ಕಟ್ಟಿ, ಎಂ.ಬಿ. ಪಾಟೀಲ, ದೇವೇಂದ್ರ ಪತ್ತಾರ, ಡಾ.ಬೋರಮ್ಮ ಪೊಲೀಸ್ ಪಾಟೀಲ, ಸುಲೋಚನ ಸಜ್ಜನ ಮತ್ತಿತರರು ಇದ್ದರು. ಸಂಗಮೇಶ ಶಿವಣಗಿ, ಬಾಪುಗೌಡ ಪಾಟೀಲ, ಎನ್.ಆರ್.ಮೊಕಾಶಿ ಮತ್ತು ಎಸ್.ಎಸ್.ಹುನಗುಂದ ಬಸವ ನೆನಹು, ಪ್ರಾರ್ಥನೆ ನಡೆಸಿದರು. ಮಲ್ಲಿಕಾರ್ಜುನ ಗಡೇದ ಸ್ವಾಗತಿಸಿದರು. ಬಿ.ಎಸ್.ಮೇಟಿ ನಿರೂಪಿಸಿದರು.

## ನಾಗರಬೆಟ್ಟ ಏತ ನೀರಾವರಿ ಯೋಜನೆ ಪೂರ್ಣಕ್ಕೆ ಆಗ್ರಹ

# ಜೂನ್ 8ರಂದು ಆಲಮಟ್ಟಿಯಲ್ಲಿ ಬೃಹತ್ ಪ್ರತಿಭಟನೆ ನಡೆಸಲು ರೈತಸಂಘ ನಿರ್ಧಾರ

■ ಉದಯರಶ್ಮಿ ದಿನಪತ್ರಿಕೆ

ಆಲಮಟ್ಟಿ: 2018ರಲ್ಲಿ ಆರಂಭಗೊಂಡ ಮುದ್ದೇಬಿಹಾಳ ತಾಲ್ಲೂಕಿನ ನಾಗರಬೆಟ್ಟ ಏತ ನೀರಾವರಿ ಯೋಜನೆಯನ್ನು ಕೂಡಲೇ ಪೂರ್ಣಗೊಳಿಸುವಂತೆ ಆಗ್ರಹಿಸಿ ಜೂನ್ 8ರಂದು ಆಲಮಟ್ಟಿಯಲ್ಲಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ತಿಳಿಸಿದೆ. ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಪದಾಧಿಕಾರಿಗಳಾದ ಶಾಂತಗೌಡ ಪಾಟೀಲ (ನಡಹಳ್ಳಿ), ಸಂಗಮೇಶ ಸಗರ, ಕಲ್ಲು ಸೊನ್ನದ, ಸೀತಪ್ಪ ಗಣಿ ಅವರು, "ಜೂನ್ 8ರಂದು ಆಲಮಟ್ಟಿಯ ಮುಖ್ಯ ಎಂಜಿನಿಯರ್ ಕಚೇರಿ ಎದುರು ಪ್ರತಿಭಟನೆ ನಡೆಯಲಿದೆ. ನಾಗರಬೆಟ್ಟ ಯೋಜನೆಯ 14 ಫಲಾನುಭವಿ ಗ್ರಾಮಗಳ ರೈತರು, ರೈತ ಸಂಘದ ರಾಜ್ಯ ಘಟಕದ ಅಧ್ಯಕ್ಷ ಚೂನ್ನಪ್ಪ ಪೂಜೇರಿ, ಶಶಿಕಾಂತ ಗುರೂಜಿ ಸೇರಿದಂತೆ ಹಲವು ಹೋರಾಟಗಾರರು ಭಾಗವಹಿಸಲಿದ್ದಾರೆ" ಎಂದರು.

**ರೈತರ ಪ್ರಮುಖ ಬೇಡಿಕೆಗಳು**

1. ಭೂಮಿ ವಶಪಡಿಸಿಕೊಂಡ ಎಲ್ಲಾ ಬಾಧಿತ ರೈತರಿಗೆ ಅವಾರ್ಡ್ ಪ್ರಕ್ರಿಯೆ ಪೂರ್ಣಗೊಳಿಸಿ ಪರಿಹಾರ ನೀಡಬೇಕು.
2. ಬಾಕಿ ಉಳಿದ 900 ಮೀಟರ್ ಕಾಲುವೆ ಕಾಮಗಾರಿಯನ್ನು ತಕ್ಷಣ ಆರಂಭಿಸಬೇಕು.
3. ಜುಲೈ ತಿಂಗಳೊಳಗೆ ಕಾಮಗಾರಿ ಪೂರ್ಣಗೊಳಿಸಿ ಕಾಲುವೆಗೆ ನೀರು ಹರಿಸಬೇಕು.

"ಹೋರಾಟದ ದಿನ ಕೆಬಿಜೆಎನ್‌ಎಲ್ ಅಧಿಕಾರಿಗಳು, ಎಸ್‌ಎಲ್‌ಓ, ತಹಶೀಲ್ದಾರ್, ಎಡಿಎಲ್‌ಆರ್ ಸೇರಿದಂತೆ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಸ್ಥಳದಲ್ಲಿ ಹಾಜ-ರಿರಬೇಕು. ಅದೇ ದಿನ ಸಮಸ್ಯೆ ಬಗೆಹರಿಯದಿದ್ದರೆ ಮುಂದಿನ ಹೋರಾಟದ ರೂಪುರೇಷೆಯನ್ನು ಅಂದೇ ಪ್ರಕಟಿಸಲಾಗುವುದು" ಎಂದು ಎಚ್ಚರಿಸಿದರು.

**9 ವರ್ಷ ಕಳೆದರೂ ಕಾಮಗಾರಿ ಅಪೂರ್ಣ:**

3200 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಒದಗಿಸುವ ಈ ಯೋಜನೆಯ ಮುಖ್ಯ ಕಾಲುವೆ ಕಾಮಗಾರಿ ಆರಂಭವಾಗಿ 9 ವರ್ಷ ಕಳೆದರೂ ಪೂರ್ಣಗೊಂಡಿಲ್ಲ. ಯೋಜನೆಗೆ 346 ಎಕರೆ ಭೂಮಿ ವಶಪಡಿಸಿಕೊಳ್ಳಬೇಕಿದ್ದು, ಕೇವಲ 111 ಎಕರೆ ಭೂಮಿಗೆ ಮಾತ್ರ ವಿಶೇಷ ಭೂಸ್ವಾಧೀನಾಧಿಕಾರಿಗಳು ಅವಾರ್ಡ್ ಮಾಡಿದ್ದಾರೆ. ಉಳಿದ ಭೂಮಿ ಸ್ವಾಧೀನ ಪ್ರಕ್ರಿಯೆ ನಡೆದಿಲ್ಲ ಎಂದು ಅವರು ಆರೋಪಿಸಿದರು."ಭೂಸ್ವಾಧೀನ ನೋಟಿಸ್ ನೀಡದೆ ರೈತರ ಹೊಲದಲ್ಲಿ ಕಾಲುವೆ ನಿರ್ಮಿಸಲಾಗಿದೆ. ಪ್ರತ್ಯೇಕ ಕಡೆಗಳಲ್ಲಿ ಒಟ್ಟು 900 ಮೀಟರ್ ಕಾಲುವೆ ಕಾಮಗಾರಿ ಮಾತ್ರ ಬಾಕಿ ಇದೆ. ತಕ್ಷಣ ಸಮಸ್ಯೆ ಬಗೆಹರಿಸಿ ಕಾಮಗಾರಿ ಆರಂಭಿಸಬೇಕು" ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರವಿಶಂಕರ ಕೋತಿನ, ಸಾಬಣ್ಣ ಅಂಗಡಿ, ಶಶಿಕಾಂತ ದೇಸಾಯಿ, ಸುಭಾಸ ಚೋಪಡೆ, ವೆಂಕಟೇಶ ವಡ್ಡರ ಮತ್ತಿತರರು ಉಪಸ್ಥಿತರಿದ್ದರು

# ಶಿವಾನಂದ ಪಾಟೀಲರಿಗೆ ಡಿಸಿಎಂ ಸ್ಥಾನ ನೀಡಲು ಒತ್ತಾಯ

■ ಉದಯರಶ್ಮಿ ದಿನಪತ್ರಿಕೆ



ಬಸವನ ಬಾಗೇವಾಡಿ: ರಾಜ್ಯದ ಜವಳಿ, ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರಾದ ಶಿವಾನಂದ ಪಾಟೀಲ–ರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವ ಮೂಲಕ ಉತ್ತರ ಕರ್ನಾಟಕ ಭಾಗಕ್ಕೆ ನ್ಯಾಯ ಒದಗಿಸಬೇಕೆಂದು ಬಸವನಬಾಗೇವಾಡಿ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ರಿಹಾನ್ ಆರ್. ಕೆರೂರ್ (ಬಾಗವಾನ್) ಅವರು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಸಚಿವ ಶಿವಾನಂದ ಪಾಟೀಲರು ಹಲವು ದಶಕಗಳಿಂದ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿ, ಜನಪರ ನಾಯಕರಾಗಿ ಹಾಗೂ ಅಭಿವೃದ್ಧಿ ಪರ ಚಿಂತಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ವಿಜಯಪುರ ಜಿಲ್ಲೆ ಸೇರಿದಂತೆ ಉತ್ತರ ಕರ್ನಾಟಕ ಭಾಗದ ಅಭಿವೃದ್ಧಿಗೆ ಅವರು ನೀಡಿರುವ ಕೊಡುಗೆ ಅಪಾರವಾಗಿದೆ ಎಂದು ತಿಳಿಸಿದ್ದಾರೆ.

ರಾಜ್ಯ ಸಚಿವ ಸಂಪುಟದಲ್ಲಿ ಮಹತ್ವದ ಖಾತೆಗಳನ್ನು ಸಮರ್ಥವಾಗಿ ನಿರ್ವಹಿಸುತ್ತಿರುವ ಶಿವಾನಂದ ಪಾಟೀಲರು ರೈತರು, ಕಾರ್ಮಿಕರು, ನೇಕಾರರು ಹಾಗೂ ಸಾಮಾನ್ಯ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಜನನಾಯಕರೆಂದು ಗುರುತಿಸಿಕೊಂಡಿದ್ದಾರೆ. ಅವರ ಆಡಳಿತ ಅನುಭವ, ರಾಜಕೀಯ ಪ್ರೌಢಿಮೆ ಮತ್ತು ಜನಸೇವೆಯ ಬದ್ಧತೆಯನ್ನು ಪರಿಗಣಿಸಿ ಅವರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವುದು ಸೂಕ್ತವಾಗಿರುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಚಿವ ಶಿವಾನಂದ ಪಾಟೀಲರು ಜನಸಾಮಾನ್ಯರೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಅವರ ನೇತೃತ್ವದಲ್ಲಿ ವಿಜಯಪುರ ಜಿಲ್ಲೆ ಸೇರಿದಂತೆ ರಾಜ್ಯದ ಹಲವು ಭಾಗಗಳಲ್ಲಿ ಅಭಿವೃದ್ಧಿ ಕಾರ್ಯಗಳು ವೇಗ ಪಡೆದುಕೊಂಡಿವೆ. ಆದ್ದರಿಂದ ಅವರ ಸೇವೆಯನ್ನು ಗುರುತಿಸಿ ರಾಜ್ಯ ಸರ್ಕಾರವು ಉಪಮುಖ್ಯಮಂತ್ರಿ ಹುದ್ದೆ ನೀಡಿ ಗೌರವಿಸಬೇಕೆಂದು ರಿಹಾನ್ ಆರ್. ಕೆರೂರ್ (ಬಾಗವಾನ್) ಒತ್ತಾಯಿಸಿದ್ದಾರೆ.



# ಕ್ಯಾಂಪಸ್ ಸಂದರ್ಶನದಲ್ಲಿ 81 ಜನ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಬಿ.ಎಲ್.ಡಿ.ಇ ಕೈಗಾರಿಕೆ ತರಬೇತಿ ಸಂಸ್ಥೆ(ಐಟಿಐ)ಯಲ್ಲಿ ಸೋಮವಾರ ಕೋಲಾರದ ಹೋಂಡಾ ಮೋಟಾರ್ ಸೈಕಲ್ ಸ್ಕೂಟರ್ ಇಂಡಿಯಾ ಪ್ರೈ. ಲಿ ಕಂಪನಿ ಅಪ್ರೆಂಟಿಸ್‌ಶಿಗಾಗಿ ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ 81 ಜನ ಆಯ್ಕೆಯಾಗಿದ್ದಾರೆ.ಈ ಕ್ಯಾಂಪಸ್ ಡ್ರೈವ್ ನಲ್ಲಿ 122 ತರಬೇತಿದಾರರು ಭಾಗವಹಿಸಿದ್ದರು. ಇವರಲ್ಲಿ 81 ಜನ ಆಯ್ಕೆಯಾಗಿದ್ದು, ಬಿ.ಎಲ್.ಡಿ.ಇ ಕೈಗಾರಿಕೆ ತರಬೇತಿ ಸಂಸ್ಥೆಯ(ಐಟಿಐ)ಗೆ ಸೇರಿದ 75 ವಿದ್ಯಾರ್ಥಿಗಳಲ್ಲಿ 54 ವಿದ್ಯಾರ್ಥಿಗಳು ಆಯ್ಕೆಗೊಂಡಿದ್ದಾರೆ. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಸುನಿಲಗೌಡ ಪಾಟೀಲ ಹಾಗೂ ಪ್ರಾಚಾರ್ಯರ ಎಂ. ಡಿ. ಪಡಸಲಗಿ ಅಭಿನಂದನೆ ಸಲ್ಲಿಸಿದ್ದಾರೆ.

# ಶ್ವೇತ ರಕ್ತಕಣ ಪ್ರತಿಜನಕ ಹೊಂದಾಣಿಕೆ ಪರೀಕ್ಷೆ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅತ್ಯಾಧುನಿಕ ಆರೋಗ್ಯ ಸೇವೆಯನ್ನು ಸಮಾಜದ ಪ್ರತಿಯೊಬ್ಬರಿಗೂ ಸುಲಭವಾಗಿ ಮತ್ತು ಸಮಾನವಾಗಿ ತಲುಪಿಸುವ ಉದ್ದೇಶದಿಂದ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದಲ್ಲಿ ಉಚಿತ ಮಾನವ ಶ್ವೇತ ರಕ್ತಕಣ ಪ್ರತಿಜನಕ ಹೊಂದಾಣಿಕೆ ಎಚ್.ಎಲ್.ಎ (Human Leukocyte Antigen Typing) ಪರೀಕ್ಷೆ ಶಿಬಿರ ನಡೆಯಿತು.ಭಾರತೀಯ ಮಕ್ಕಳ ವೈದ್ಯರ ಸಂಘ ವಿಜಯಪುರ ಶಾಖೆ ಮತ್ತು ಎನ್. ಎಚ್. ಮಜುಂದಾರ ಶಾ ವೈದ್ಯಕೀಯ ಕೇಂದ್ರದ ಸಹಯೋಗದಲ್ಲಿ ನಡೆದ ಈ ಶಿಬಿರದಲ್ಲಿ ಆರ್ಥಿಕವಾಗಿ ಹಿಂದುಳಿದ ರೋಗಿಗಳಿಗೆ ಉಚಿತವಾಗಿ ಅಂಗಾಂಗ ಪ್ರತಿರೋಪಣೆಗೆ ಅತ್ಯಂತ ಮಹತ್ವದ ಹೊಂದಾಣಿಕೆ ಪರೀಕ್ಷೆ ನಡೆಸಲಾಯಿತು. ಈ ಶಿಬಿರದಲ್ಲಿ ಒಟ್ಟು 40 ರೋಗಿಗಳು ಉಚಿತ ಪರೀಕ್ಷೆಯ ಸೌಲಭ್ಯವನ್ನು ಪಡೆದುಕೊಂಡರು. ಸುಮಾರು ರೂ. 1.60 ಲಕ್ಷ ಮೌಲ್ಯದ ಅತ್ಯಾಧುನಿಕ ಪರೀಕ್ಷೆಗಳನ್ನು ಯಾವುದೇ ಶುಲ್ಕವಿಲ್ಲದೆ ನಡೆಸಲಾಗಿದ್ದು, ಪ್ರತಿ ರೋಗಿಗೂ ಸರಾಸರಿ ರೂ. 4 ಸಾವಿರ ವೆಚ್ಚ ಉಳಿತಾಯವಾದಂತಾಗಿದೆ.

ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಾಧಿಪತಿ ಬಸನಗೌಡ ಎಂ. ಪಾಟೀಲ, ಸಮಕುಲಾಧಿಪತಿ ಡಾ. ವೈ. ಎಂ. ಜಯರಾಜ, ಕುಲಪತಿ ಡಾ. ಅರುಣ್ ಸಿ. ಇನಾಮದಾರ ಹಾಗೂ ಪ್ರಾಂಶುಪಾಲೆ ಡಾ. ತೇಜಸ್ವಿನಿ ವಲ್ಲಭ ಅವರ ಮಾರ್ಗದರ್ಶನದಲ್ಲಿ ನಡೆದ ಈ ಪರೀಕ್ಷೆ ಶಿಬಿರದಲ್ಲಿ ಕಿರಣ್ ಮಜುಂದಾರ ಶಾ ವೈದ್ಯಕೀಯ ಕೇಂದ್ರದ ಮಕ್ಕಳ ರಕ್ತ ಹಾಗೂ ಕ್ಯಾನ್ಸರ್ ತಜ್ಞೆ ಡಾ. ಶೋಭಾ ಬಡಿಗೇರ, ಬಿ.ಎಲ್.ಡಿ.ಇ. ಸಂಸ್ಥೆಯ ಮಕ್ಕಳ ರಕ್ತ ಮತ್ತು ಕ್ಯಾನ್ಸರ್ ತಜ್ಞ ಡಾ. ಅತುಲ ಥೊಬ್ಬಿ, ಆರೋಗ್ಯ ವಿಜ್ಞಾನ ವಿಭಾಗದ ಡೀನ್ ಡಾ. ಎಸ್. ವಿ. ಪಾಟೀಲ, ಡಾ. ಎಸ್. ಎಸ್. ಕಲ್ಯಾಣಶೆಟ್ಟರ ಹಾಗೂ ಡಾ. ಸಿದ್ದು ಚರ್ಕಿ ಮುಂತಾದವರು ಉಪಸ್ಥಿತರಿದ್ದರು.



# ವಿಜಯಪುರದಲ್ಲಿ ಅಬಕಾರಿ ದಾಳಿ: ಕಳ್ಳಭಟ್ಟಿ ಸರಾಯಿ ಜಪ್ತಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಜಿಲ್ಲೆಯ ಅಬಕಾರಿ ಇಲಾಖೆಯ ಅಧಿಕಾರಿಗಳು ನಡೆಸಿದ ವಿಶೇಷ ದಾಳಿಯಲ್ಲಿ ಕಳ್ಳಭಟ್ಟಿ ಸರಾಯಿ ಮತ್ತು ಬೆಲ್ಲದ ರಸಾಯನವನ್ನು ಜಪ್ತಿ ಮಾಡಲಾಗಿದ್ದು, ಆರೋಪಿತ ಮಹಿಳೆಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮಾನ್ಯ ಅಬಕಾರಿ ಅಪರ ಆಯುಕ್ತರು (ಜಾರಿ ಮತ್ತು ಅಪರಾಧ) ಬೆಳಗಾವಿ ಹಾಗೂ ಅಬಕಾರಿ ಜಂಟಿ ಆಯುಕ್ತರು (ಜಾರಿ ಮತ್ತು ತನಿಖೆ) ಬೆಳಗಾವಿ ಅವರ ಮಾರ್ಗದರ್ಶನದಲ್ಲಿ, ಅಬಕಾರಿ ಉಪ ಆಯುಕ್ತರು ವಿಜಯಪುರ ಜಿಲ್ಲೆ ಅವರ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ವಲಯಗಳ ಅಬಕಾರಿ ನಿರೀಕ್ಷಕರು ಹಾಗೂ ಸಿಬ್ಬಂದಿ ಸಾಮೂಹಿಕ ಅಬಕಾರಿ ದಾಳಿ ನಡೆಸಿದರು.ಈ ವೇಳೆ ಬಂದ ಖಚಿತ ಮಾಹಿತಿಯ ಮೇರೆಗೆ ವಿಜಯಪುರ ನಗರದ ಹರಣಶಿಕಾರಿ ಕಾಲನಿಯ ಮರಗಮ್ಮ ದೇವಸ್ಥಾನದ ಸಮೀಪದಲ್ಲಿರುವ ಲೈಲಾ ಶಿವಕುಮಾರ ಉರ್ಫ್ ಶಿವಾಜಿ ಜುಮನಾಳ ಅವರ ನಿವಾಸದ ಮೇಲೆ ದಾಳಿ ನಡೆಸಲಾಯಿತು.ದಾಳಿಯ ಸಂದರ್ಭದಲ್ಲಿ ಅಧಿಕಾ–ರಿಗಳು 3.5 ಲೀಟರ್ ಕಳ್ಳಭಟ್ಟಿ ಸರಾಯಿ ಹಾಗೂ 1 ಲೀಟರ್ ಬೆಲ್ಲದ ರಸಾಯನ ವನ್ನು ಜಪ್ತಿ ಮಾಡಿದರು.

ಈ ಸಂಬಂಧ ಆರೋಪಿತೆ ಲೈಲಾ ಶಿವಕುಮಾರ ಉರ್ಫ್ ಶಿವಾಜಿ ಜುಮನಾಳ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆಯಡಿ ಘೋರ ಪ್ರಕರಣ ದಾಖಲಿಸಲಾಗಿದೆ.ವಿಜಯಪುರ ವಲಯದ ಅಬಕಾರಿ ಉಪ ನಿರೀಕ್ಷಕರಾದ ಮಲ್ಲಣ್ಣ ಆರ್. ನಿಲಜಕರ ಅವರು ಪ್ರಕರಣ ದಾಖಲಿಸಿದ್ದಾರೆ.

ದಾಳಿಯಲ್ಲಿ ಅಬಕಾರಿ ಉಪ ನಿರೀಕ್ಷಕ ಮಲ್ಲಣ್ಣ ಆರ್. ನಿಲಜಕರ, ಅಬಕಾರಿ ಮುಖ್ಯ ಪೇದೆ ಪ್ರವೀಣ ಪಾಟೀಲ, ಅಬಕಾರಿ ಪೇದೆ ಈರಣ್ಣ ಆರ್. ಹಟ್ಟಿ, ಶ್ರೀಶೈಲ ಬಂಡಗಾರ ಸೇರಿದಂತೆ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ ಭಾಗವಹಿಸಿದ್ದರು.

# ಜಿಲ್ಲಾಧ್ಯಕ್ಷರಾಗಿ ಲಮಾಣಿ, ಪ್ರ.ಕಾರ್ಯದರ್ಶಿಯಾಗಿ ಕೊಣದಿ ಆಯ್ಕೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕರ್ನಾಟಕ ರಾಜ್ಯ ಪ್ರಾಥ–ಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ನೂತನ ಅಧ್ಯಕ್ಷರಾಗಿ ಅರ್ಜುನ ಗಂ ಲಮಾಣಿ ಆಯ್ಕೆಯಾಗಿದ್ದಾರೆ.

ಅದರಂತೆ ಜಿಲ್ಲಾ ಪ್ರಧಾನಕಾರ್ಯದರ್ಶಿಯಾಗಿ ಹಣಮಂತ ಬ. ಕೊಣದಿ, ಉಪಾಧ್ಯಕ್ಷರಾಗಿ ಬಿ ಎಸ್ ಶೆಖಣ್ಣವರ, ಹಾಗೂ ಶ್ರೀಮತಿ ಆರ್ ಎಸ್ ಗಿಡ್ಡಪ್ಪಗೋಳ, ಖಜಾಂಚಿಯಾಗಿ ಸುನೀಲ ಯಳಮೇಲಿ, ಸಹಕಾರ್ಯದರ್ಶಿಯಾಗಿ ಎಂ ಎಂ ಮುಲ್ಲಾ ಹಾಗೂ ಶ್ರೀಮತಿ ಜ್ಯೋತಿ ಎಸ್ ಹಿಪ್ಪರಗಿ, ಸಂಘಟನಾ ಕಾರ್ಯದರ್ಶಿಗಳಾಗಿ ಕೆ ಆರ್ ಕೊಕಟನೂರ ಹಾಗೂ ಶ್ರೀಮತಿ ಭಾರತಿ ಚಿಮ್ಮಲಗಿ ಆಯ್ಕೆಯಾಗಿದ್ದಾರೆ.

ಇವರ ಆಯ್ಕೆ ಯನ್ನು ರಾಜ್ಯ ಚುನಾವಣಾ ಅಧಿಕಾರಿಗಳಿಂದ ಅನುಮೋದನೆ ಪಡೆದು ಜಿಲ್ಲಾ ಸಂಘದ ಪದಾಧಿಕಾರಿಗಳ ಫಲಿತಾಂಶ ಪ್ರಕಟಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಮಲ್ಲಿಕಾರ್ಜುನ ಬಿ ಮೆಡೆಗಾರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ ಅಭಿಮತ

# ಪರಿಪೂರ್ಣ ವೈದ್ಯಕೀಯ ಅಧ್ಯಯನಕ್ಕೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಪರಿಪೂರ್ಣ ವೈದ್ಯಕೀಯ ಅಧ್ಯಯನಕ್ಕೆ ಕೌಶಲ್ಯಾಭಿವೃದ್ಧಿ ತರಬೇತಿ ಅಗತ್ಯ ಎಂದು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಕಾಲೇಜಿನ ಪ್ರಾಚಾರ್ಯೆ ಡಾ. ತೇಜಸ್ವಿನಿ ವಲ್ಲಭ ಹೇಳಿದ್ದಾರೆ.

ಶುಕ್ರವಾರ ನಗರದದಲ್ಲಿ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಶಸ್ತ್ರ ಚಿಕಿತ್ಸೆ ವಿಭಾಗದ ವತಿಯಿಂದ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯ ಸಹಯೋಗದಲ್ಲಿ ಆಯೋಜಿಸಲಾದ ಪ್ರಥಮ ವರ್ಷದ ಶಸ್ತ್ರ ಚಿಕಿತ್ಸೆ ಆಧಾರಿತ ವಿಭಾಗಗಳ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳ ಕೌಶಲ್ಯಾಭಿವೃದ್ಧಿ ತರಬೇತಿ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯು ದೇಶಾದ್ಯಂತ ವೈದ್ಯಕೀಯ ಮಹಾವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ಚಲಿಸುವ ವಾಹನದ ಮೂಲಕ ಕೌಶಲ್ಯಾಭಿವೃದ್ಧಿ ತರಬೇತಿ ನೀಡುತ್ತಿರುವುದು ಶ್ಲಾಘನೀಯವಾಗಿದೆ. ಬಿ.ಎಲ್.ಡಿ.ಇ. ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಈಗಾಗಲೇ ವಿಶ್ವದರ್ಜೆಯ ಕೌಶಲ್ಯಾಭಿವೃದ್ಧಿ ಪ್ರಯೋಗಾಲಯ ಕಾರ್ಯನಿರ್ವಹಿಸುತ್ತಿದ್ದು, ಸಾವಿರಾರು ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆದಿದ್ದಾರೆ ಎಂದು ಅವರು ತಿಳಿಸಿದರು.

ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ. ಮಂಜುನಾಥ ಕೋಟೆಣ್ಣವರ ಅವರು ಸ್ವಾಗತಿಸಿ ಮಾತನಾಡಿ, ಶಸ್ತ್ರ ಚಿಕಿತ್ಸೆ ಆಧಾರಿತ ವಿಭಾಗಗಳ ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ರೋಗಿಗಳಿಗೆ ಸಂಪೂರ್ಣ ಪ್ರಮಾಣದ ಚಿಕಿತ್ಸೆ ನೀಡುವ ಮುನ್ನ ಇಂಥ ಕೌಶಲ್ಯಾಭಿವೃದ್ಧಿ ತರಬೇತಿಗಳು ಅವರ ಆತ್ಮವಿಶ್ವಾಸವನ್ನು ಹೆಚ್ಚಿಸಲು ಸಹಕಾರಿಯಾಗುತ್ತವೆ. ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ನಿಯಮಾವಳಿಗಳ ಪ್ರಕಾರವೂ ಇಂತಹ ತರಬೇತಿಗಳು ಅತ್ಯಗತ್ಯವಾಗಿವೆ ಎಂದು ಹೇಳಿದರು.

ಶಿಬಿರದಲ್ಲಿ ಬಿ.ಎಲ್.ಡಿ.ಇ. ವೈದ್ಯಕೀಯ ಮಹಾವಿದ್ಯಾಲಯ, ಅಲ್ ಅಮೀನ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಜಿಲ್ಲಾ ಆಸ್ಪತ್ರೆಯ ಶಸ್ತ್ರ ಚಿಕಿತ್ಸೆ ವಿಭಾಗ, ಎಲುಬು ಮತ್ತು ಕೀಲು ವಿಭಾಗ ಹಾಗೂ ಸ್ತ್ರೀರೋಗ ವಿಭಾಗಗಳ ಸುಮಾರು 60 ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಡಾ. ಎಂ. ಬಿ. ಪಾಟೀಲ, ಡಾ. ವಿಜಯಾ ಪಾಟೀಲ, ಡಾ. ರಮಾಕಾಂತ ಬಳೂರಕರ, ಡಾ. ದೀಪಕ ಚವ್ಹಾಣ, ಡಾ. ದಯಾನಂದ ಬಿರಾದಾರ ಹಾಗೂ ಡಾ. ಪ್ರದೀಪ ಜಾಜು, ಡಾ. ಗಿರೀಶ ಕುಲ್ಲೊಳ್ಳಿ, ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯ ಅನಿಲಕುಮಾರ, ಅಮನ್ ಅಥಣಿಕರ, ಶ್ರೀನಿವಾಸ ಮುಂತಾದವರು ಉಪಸ್ಥಿತರಿದ್ದರು.

# ಅತ್ಯಾಧುನಿಕ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಯಶಸ್ವಿ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ.. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಿವಿ, ಮೂಗು ಹಾಗೂ ಗಂಟಲು ವಿಭಾಗದಲ್ಲಿ ಶುಕ್ರವಾರ ಅತ್ಯಾಧುನಿಕ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಲಾಯಿತು.

ಸುಮಾರು ಒಂದು ವರ್ಷ ಏಳು ತಿಂಗಳ ಜನ್ಮಜಾತ ಕಿವುಡುತನ ಹೊಂದಿರುವ ಮಗುವಿಗೆ ಅತ್ಯಾಧುನಿಕ ನೆಕ್ಸಾ(ಓಇಫಿಂ 1022) ಕಾಕ್ಲಿಯರ್ ಇಂಪ್ಲಾಂಟ್ ಉಪಕರಣವನ್ನು ಒಳಕಿವಿಯ ಭಾಗದಲ್ಲಿ ಅಳವಡಿಸಲಾಯಿತು. ಈ ಉಪಕರಣವು ಮಾತನಾಡುವ ಧ್ವನಿಗಳನ್ನು ವಿದ್ಯುತ್ ಪ್ರೇರಣೆಯಾಗಿ ಪರಿವರ್ತಿಸಿ, ಕಿವಿಯ ನರಗಳನ್ನು ಉತ್ತೇಜಿಸುವ ಮೂಲಕ ಮೆದುಳಿಗೆ ಸಂದೇಶಗಳನ್ನು ಕಳುಹಿಸಿ, ಪದಗಳನ್ನು ಸ್ಪಷ್ಟವಾಗಿ ಕೇಳಿಸಿಸುವ ಸಾಮರ್ಥ್ಯವನ್ನು ಹೊಂದಿದೆ.

ಈ ಶಸ್ತ್ರಚಿಕಿತ್ಸೆಯಲ್ಲಿ ಬಳಸಲಾದ ಸ್ಮಾರ್ಟ್ ನಾವ್(ಖಒಂಖಖಿ ಓಂಗಿ) ತಂತ್ರಜ್ಞಾನವು ಮೊಬೈಲ್ ಜೊತೆ ನೇರ ಸಂಪರ್ಕ ಹೊಂದಿದ್ದು, ಡೈರೆಕ್ಟ್ ಸ್ಟ್ರೀಮಿಂಗ್ ಮತ್ತು ಟ್ರ್ಯಾಕಿಂಗ್ ಸೌಲಭ್ಯವನ್ನು ಒದಗಿಸುತ್ತದೆ. ಈ ರೀತಿಯ ಅತ್ಯಾಧುನಿಕ ತಂತ್ರಜ್ಞಾನ ಹೊಂದಿದ ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆ ಉತ್ತರ ಕರ್ನಾಟಕ ವಿಭಾಗದಲ್ಲಿ ಇದೇ ಮೊದಲ ಬಾರಿಗೆ ನಡೆದಿರುವುದು ವಿಶೇಷವಾಗಿದೆ.

ಈ ಸಂದರ್ಭದಲ್ಲಿ ಮಾತನಾಡಿದ ಬಿ.ಎಲ್.ಡಿ.ಇ. ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ. ಅರುಣ ಚಂ. ಇನಾಮದಾರ, ಕಳೆದ ಎರಡು ವರ್ಷಗಳಿಂದ ಆಸ್ಪತ್ರೆಯಲ್ಲಿ ಈ ರೀತಿಯ ಚಿಕಿತ್ಸೆಗಳು ನಡೆಯುತ್ತಿದ್ದು, ಚಿಕಿತ್ಸೆ ಪಡೆದ ಮಕ್ಕಳು ವಾಕ್ ಮತ್ತು ಶ್ರವಣ ತಜ್ಞರಿಂದ ತರಬೇತಿ ಪಡೆದು ಸಾಮಾನ್ಯ ಮಕ್ಕಳಂತೆ ಮಾತನಾಡಲು ಸಾಧ್ಯವಾಗುತ್ತಿದೆ ಎಂದು ತಿಳಿಸಿದರು.

ವೈದ್ಯಕೀಯ ಮಹವಿದ್ಯಾಲಯದ ಪ್ರಾಚಾರ್ಯೆ ಮತ್ತು ತಜ್ಞವೈದ್ಯೆ ಡಾ. ತೇಜಸ್ವಿನಿ ವಲ್ಲಭ ಮಾತನಾಡಿ, ಜನ್ಮಜಾತ ಕಿವುಡುತನ ಹೊಂದಿರುವ ಮಕ್ಕಳಿಗೆ ಎರಡು ವರ್ಷದೊಳಗೆ ಚಿಕಿತ್ಸೆ ನೀಡಿದರೆ ಅವರು ಇತರ ಮಕ್ಕಳಂತೆ ಶಿಕ್ಷಣ ಪಡೆದು ಮುಂದಿನ ದಿನಗಳಲ್ಲಿ ಉತ್ತಮ ಭವಿಷ್ಯ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತದ. ಮೂರು ವರ್ಷಗಳ ನಂತರ ಚಿಕಿತ್ಸೆ ಹೆಚ್ಚು ಪರಿಣಾಮಕಾರಿಯಾಗುವುದಿಲ್ಲ ಎಂದು ಹೇಳಿದರು.

ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗಳ ಸಂಯೋಜಕಿ ಡಾ. ಎಚ್. ಟಿ. ಲತಾದೇವಿ ಮಾತನಾಡಿದರು. ಈ ಸಂದರ್ಭದಲ್ಲಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಎಸ್. ಎನ್. ಬೆಂಟೂರ, ಆಸ್ಪತ್ರೆಯ ವೈದ್ಯಕೀಯ ಉಪಅಧೀಕ್ಷಕ, ಡಾ. ರವಿಕುಮಾರ ಬಿರಾದಾರ ಸೇರಿದಂತೆ ನಾನಾ ವೈದ್ಯರು ಮತ್ತು ಮಗುವಿನ ಪೋಷಕರು ಉಪಸ್ಥಿತರಿದ್ದರು.

## ವಿಜಯಪುರದಲ್ಲಿ ನಿವೃತ್ತಿಯಾದ ಡಿಸಿ ಕುರುಬರಗೆ ಬೀಳ್ಕೊಡುಗೆ ಸಮಾರಂಭ

# ನಾರಾಯಣಪ್ಪ ಕುರುಬರ ದಕ್ಷ ಅಧಿಕಾರಿ :ಪ್ರೊ.ಆಲಗೂರ

■ ಉದಯರಶ್ಮಿ ದಿನಪತ್ರಿಕೆ




ವಿಜಯಪುರ: ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ ಅವರು ದಕ್ಷ ಪ್ರಾಮಾಣಿಕ ಅಧಿಕಾರಿಯಾಗಿ ತಮ್ಮ ಸೌಮ್ಯಸ್ವಭಾವದಿಂದ ಕಾನೂನು ಪರಿಪಾಲಿಸುವುದರೊಂದಿಗೆ ಉತ್ತಮ ಸೇವೆ ಸಲ್ಲಿಸಿದ್ದಾರೆ ಎಂದು ಮಾಜಿ ಶಾಸಕ ಪ್ರೊ. ರಾಜು ಆಲಗೂರು ಹೇಳಿದರು.

ಸೇವಾ ನಿವೃತ್ತಿ ಹೊಂದಿದ ಕಲ್ಯಾಣ ಕರ್ನಾಟ ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ ಜೊತೆಗೆ ನಿವೃತ್ತಿ ಹೊಂದಿದ ಇತರೇ ಸಿಬ್ಬಂದಿಗೆ ಇಲ್ಲಿನ ರಾಜರಾಜೇಶ್ವರಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಂಡಿದ್ದ ಬೀಳ್ಕೊಡುಗೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಅರವಿಂದ ಹಾಗರಗಿ ಮಾತನಾಡಿ, ಸಂಸ್ಥೆಯ ಸಿಬ್ಬಂದಿ ಸಹಕಾರದೊಂದಿಗೆ ನಾರಾಯಣಪ್ಪ ಕುರುಬರ ಅವರು ಸಂಸ್ಥೆ ಕಟ್ಟುವಲ್ಲಿ ಅವಿರತ ಶ್ರಮ ವಹಿಸಿದ್ದಾರೆ. ಖಡಕ್ ಅಧಿಕಾರಿಯಾಗಿದ್ದ ಕುರುಬರ ಅವರು, ಕಾನೂನು ಸೇವಾ ಪ್ರಾಧಿಕಾರದೊಂದಿಗೆ ಸುಮಧುರ ಒಡನಾಟ ಹೊಂದಿದ್ದರು ಎಂದು ಹೇಳಿದರು.

ಸೋಮನಾಥ ಕಳ್ಳಿಮನಿ ಮಾತನಾಡಿದರು. ಸನ್ಮಾನ ಸ್ವೀಕರಿಸಿ ಮಾತನಾಡಿದ ವಿಭಾಗೀಯ ನಿಯಂತ್ರಣಾಧಿಕಾರಿ ನಾರಾಯಣಪ್ಪ ಕುರುಬರ, ಸೇವಾವಧಿಯುದ್ದಕ್ಕೂ ಸಹಕಾರ ನೀಡಿದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರನ್ನು ಸ್ಮರಿಸಿದರು.

ಯುವಜನ ಸೇವೆ ಹಾಗೂ ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ರಾಜಶೇಖರ ಧೈವಾಡಿ ಮಾತನಾಡಿ, ಸೇವೆಯ ಪಥದಲ್ಲಿ ಕರ್ತವ್ಯದ ದೀಪ ಬೆಳಗಿಸಿ, ಯಶಸ್ಸಿನ ಹಾದಿಯಲ್ಲಿ ಬೃಹತ್ ಸಂಸ್ಥೆ ಮುನ್ನಡೆಸಿದ ಪ್ರೀತಿಯ ಅಧಿಕಾರಿ ನಾರಾಯಣಪ್ಪ ಕುರುಬರ ಅವರು, ಸರ್ಕಾರಿ ಸೇವೆಯಿಂದ ನಿವೃತ್ತಿಯಾಗುತ್ತಿದ್ದರೂ, ನಿಮ್ಮ ಪ್ರೀತಿ, ಮಾರ್ಗದರ್ಶನ ಹಾಗೂ ತಮ್ಮ ಅನುಭವದ ಕಣಜ ಹಿತ ನುಡಿಗಳು ಎಂದಿಗೂ ನಿವೃತ್ತಿಯಾಗುವುದಿಲ್ಲ ಎಂದರು.

ಇದೇ ಸಂದರ್ಭದಲ್ಲಿ ಅಡಿವೆಪ್ಪ ಸಾಲಗಲ್, ಒಡಲ ಧ್ವನಿಯ ಅಧ್ಯಕ್ಷೆ ಭುವನೇಶ್ವರಿ ಮಾತನಾಡಿದರು.

ಇದಕ್ಕೂ ಮುನ್ನ ಸಮಾರಂಭದಲ್ಲಿ ನಾರಾಯಣಪ್ಪ ದಂಪತಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಡಲಾಯಿತು.

ಈ ವೇಳೆ ಮೇಯರ್ ಮಡಿವಾಳಪ್ಪ ಕರಡಿ, ವಕೀಲರ ಸಂಘದ ಅಧ್ಯಕ್ಷ ಬಿರಾದಾರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಂತೋಷ ಭೋವಿ, ವಾರ್ತಾಧಿಕಾರಿ ಅಮರೇಶ ದೊಡಮನಿ, ಅಡಿವೆಪ್ಪ ಸಾಲಗಲ್, ಸೇರಿದಂತೆ ವಿಭಾಗೀಯ ಕಚೇರಿ, ನಾನಾ ಘಟಕದ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ, ಸಾರ್ವಜನಿಕರು ಪಾಲ್ಗೊಂಡಿದ್ದರು.

## ಶಾಸಕ ಅನಿಲ್ ಚಿಕ್ಕಮಾದು ಬಳಿ ನಿಯೋಗ ಕರೆದೊಯ್ಯಲು ನಿರ್ಧಾರ

# ಶ್ರೀ ಚಿಕ್ಕದೇವಮ್ಮ ಬೆಟ್ಟದಲ್ಲಿ ಮದ್ಯದಂಗಡಿ ತೆರವಿಗೆ ಒತ್ತಾಯ

■ ಉದಯರಶ್ಮಿ ದಿನಪತ್ರಿಕೆ



ಸರಗೂರು: ತಾಲೂಕಿನ ಶಕ್ತಿದೇವತೆ ಶ್ರೀ ಚಿಕ್ಕದೇವಮ್ಮ ಬೆಟ್ಟದ ತಪ್ಪಲಿನಲ್ಲಿರುವ ಹಾಲುಗಡದ ಗಣೇಶ ದೇವಾಲಯದ ಸಮೀಪ ತಲೆಯೆತ್ತಿರುವ ಮದ್ಯದಂಗಡಿ ತೆರವುಗೊಳಿಸುವ ಸಂಬಂಧ ಶಾಸಕ ಅನಿಲ್ ಚಿಕ್ಕಮಾದು ಬಳಿಗೆ ನಿಯೋಗ ಕರೆದೊಯ್ಯಲು ಸಭೆಯಲ್ಲಿ ಒಕ್ಕೊರಲ ತೀರ್ಮಾನ ಕೈಗೊಳ್ಳಲಾಯಿತು.

ತಾಲೂಕಿನ ಹಾಲುಗಡದ ಬಳಿ ನಡೆದ ಸಭೆಯಲ್ಲಿ ಇಟ್ನಾ, ಸರಗೂರು ಟೌನ್, ಚಾಮೇಗೌಡನಹುಂಡಿ, ಶಾಂತಿಪುರ, ಪುರದಕಟ್ಟೆ, ಕುನ್ನಪಟ್ಟಣ , ಮಂಚಹಳ್ಳಿ , ಕೊತ್ತೇಗಾಲ, ಸಾಗರೆ ಸೇ–ರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರು. ಪ್ರಗತಿಪರ ಚಿಂತಕರು, ಮಹಿಳಾ, ರೈತ ಹಾಗೂ ಕನ್ನಡಪರ ಸಂಘಟನೆಗಳು, ಭಕ್ತರು, ಜನಪ್ರತಿನಿಧಿಗಳು ಭಾಗವಹಿಸಿ, ಧಾರ್ಮಿಕ ಕ್ಷೇತ್ರಕ್ಕೆ ಅಪಕೀರ್ತಿ ತರಲು ತಲೆಯೆತ್ತಿರುವ ಬಾರ್ ತೆರವುಗೊಳಿಸುವ ಸಂಬಂಧ ಹೋರಾಟದ ರೂಪುರೇಷೆ ಕು–ರಿತು ಸುದೀರ್ಘ ಚರ್ಚೆ ನಡೆಸಲಾಯಿತು. ಸಭೆಯಲ್ಲಿ ಭಾಗವಹಿಸಿದ ಪ್ರತಿಯೊಬ್ಬರು ತಮ್ಮ ಅಭಿಪ್ರಾಯ, ಸಲಹೆ ಸೂಚನೆ ನೀಡಿದರು. ಬಳಿಕ ಮಾತನಾಡಿದ ಹಾಲುಗಡ ಶ್ರೀ ಚಿಕ್ಕದೇವಮ್ಮ ದೇವಸ್ಥಾನ ಜಾತ್ರಾ ಸಮಿತಿ ಅಧ್ಯಕ್ಷ ದೊಡ್ಡವೀರನಾಯಕ, ವರ್ಷದ ಹಿಂದೆಯಷ್ಟೇ ಬಾರ್ ತೆರೆಯುತ್ತಿರುವ ಬಗ್ಗೆ ನನ್ನ ಗಮನಕ್ಕೆ ಬಂದಿತ್ತು. ತಕ್ಷಣವೇ ನಾವು ಹೆಚ್ ಡಿ ಕೋಟೆಯಲ್ಲಿ ಅಬಕಾರಿ ಸಬ್ ಇನ್ಸೆಕ್ಟರ್ ಬಾರ್ ಓಪನ್ ಮಾಡಲು ಅವಕಾಶ ನೀಡದಂತೆ ಮನವಿ ಪತ್ರ ಕೂಡ ನೀಡಿದ್ದೆವು. ಇಷ್ಟಾದರೂ ಬಾರ್ ತೆರೆಯಲಾಗಿದೆ. ಧಾರ್ಮಿಕ ಕ್ಷೇತ್ರಕ್ಕೆ ಹೆಸರುವಾಸಿಯಾಗಿರುವ ಈ ಜಗದಲ್ಲಿ ಯಾವುದೇ ಕಾರಣಕ್ಕೂ ನಾವು ಬಾರ್ ನಡೆಸಲು ಬಿಡಬಾರದು. ಕಾನೂನು ರೀತಿಯಲ್ಲೇ ಹೋರಾಟ ಮಾಡೋಣ . ಅದಕ್ಕೂ ಮೊದಲು ಶಾಸಕ ಅನಿಲ್ ಚಿಕ್ಕಮಾದು ಅವರ ಗಮನಕ್ಕೆ ತರೋಣ. ಶೀಘ್ರದಲ್ಲೇ ದಿನಾಂಕ ನಿಗದಿ ಮಾಡಿ, ಎಲ್ಲರು ಶಾಸಕರ ಬಳಿ ತೆರಳಿ, ಬಾರ್ ಮುಚ್ಚಿಸುವಂತೆ ಮನವಿ ಮಾಡೋಣ. ಈ ಪ್ರಯತ್ನವು ಫಲ ಕೊಡದಿದ್ದರೆ, ಕಾನೂನು ರೀತಿಯಲ್ಲೇ ಹೋರಾಟ ಮಾಡೋಣ. ಅಲ್ಲಿಯವರೆಗೆ ಎಲ್ಲರೂ ದುಡುಕಿನ ನಿರ್ಧಾರ ತೆಗೆದುಕೊಳ್ಳಬಾರದು ಎಂದು ಹೇಳಿದರು. ಸಭೆಯಲ್ಲಿ ದೊಡ್ಡವೀರನಾಯಕ, ಬಸವನಾಯಕ, ಸಿದ್ದರಾಜು ಕಾಳಿಂಗನಾಯಕ, ಜಯರಾಮು, ಬಸವರಾಜು, ಚಾಮನಾಯಕ, ಸಣ್ಣಸ್ವಾಮಿನಾಯಕ, ಚಿನ್ನನಾಯಕ, ಲಿಂಗರಾಜು, ಬೆಟ್ಟನಾಯಕ, ಸುರೇಶ, ಚಿಕ್ಕಣ್ಣ , ವೆಂಕಟೇಶನಾಯಕ, ನವೀನ್ ಕುಮಾರ್ , ಫೈನಾನ್ಸ್ ಬಸವರಾಜು, ಶ್ರೀನಿವಾಸ, ರವಿಕುಮಾರ್, ಕೃಷ್ಣ, ಸೋಮನಾಯಕ, ಗುಡಿಗೌಡರು ರವಿಕುಮಾರ್, ಬಸವರಾಜನಾಯಕ, ಶಿವಾರ್ಚಕ ಮಹದೇವಸ್ವಾಮಿ, ಗುಡಿಗೌಡರು ಮಂಜುನಾಥ್, ಶಿವಣ್ಣ, ಬಿ ಬೆಟ್ಟನಾಯಕ, ಚೆನ್ನನಾಯಕ, ಚಿಕ್ಕನಾಯಕ, ಕೂಸಣ್ಣ, ಮಹದೇವು, ಗೋಪಾಲಗೌಡರು, ಶಂಕರ್, ನಾಗರಾಜು, ವೈಕುಂಠನಾಯಕ, ಜವರನಾಯಕ. ವೇಣು, ಮಣಿ, ಸಣ್ಣಸ್ವಾಮಿ, ಗ್ರಾಮೀಣ ಮಹೇಶ್ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಮುಖಂಡರು, ಭಕ್ತರು ಉಪಸ್ಥಿತರಿದ್ದರು.

### ಪಿಡಿಒಗೆ ತರಾಟೆ

ಸ್ಥಳಕ್ಕೆ ಬಂದ ಕೊತ್ತೇಗಾಲ ಗ್ರಾಂ.ಪಂ. ಪಿಡಿಒ ನಾಗೇಂದ್ರ ಅವರಿಗೆ ಜನರು ತೀವ್ರ ತರಾಟೆಗೆ ತೆಗೆದುಕೊಂಡರು. ಇದೊಂದು ಧಾರ್ಮಿಕ ಕ್ಷೇತ್ರ ಅನ್ನೋದನ್ನ ಮರೆತು ಯಾವ ಆಧಾರದ ಮೇಲೆ ಬಾರ್ ತೆರೆಯಲು ಎನ್ ಒಸಿ ಕೊಟ್ಟಿದ್ದೀರಾ ಎಂದು ಪ್ರಶ್ನೆಗಳ ಸುರಿಮಳೆಗೈದರು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR